ಹಿರಿಯೂರು ತಾಲ್ಲೂಕಿನಲ್ಲಿ ಕ್ಷಾಮ ಪರಿಸ್ಥಿತಿ ಇರುವುದನ್ನು ನೋಡಲು ಕೇಂದ್ರದ ಅಧ್ಯಯನ ತಂಡ ೧೯೮೪ರಲ್ಲಿ ಬೇಟಿ ಕೊಟ್ಟಾಗ ಚಿತ್ರದುರ್ಗ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ೧೯೮೪ ರಲ್ಲಿ ತೆಗೆದ ಛಾಯಾ ಚಿತ್ರವನ್ನು ಈ ಸಮಯದಲ್ಲಿ ಕೊಡಲಾಗಿದೆ. ೧೯೮೪ರಲ್ಲಿ ಶ್ರೀ ಮರಡಿ ರಂಗಪ್ಪನವರಿಗೆ ಸೇರಿದ ೧೦೦ ತೆಂಗಿನ ಮರಗಳಲ್ಲಿ ೩೦ ತೆಂಗಿನ ಮರಗಳು ಒಣಗಿ ಹೋದವೆಂದು ತಿಳಿದು ಬಂದಿದೆ. ಈ ಮರಗಳ ಒಣಗುವಿಕೆ ತೋಟವನ್ನು ಸರಿಯಾಗಿ ನೋಡಿಕೊಳ್ಳದಿರುವುದರಿಂದ ಮತ್ತು ರೋಗ ತಗಲಿದ್ದರಿಂದ ಆಗಿದೆ. ೧೯೮೪ರಲ್ಲಿ ಕ್ಷಾಮ ಪರಿಸ್ಥಿತಿ ಇದ್ದುದು ವಾಸ್ತವ. ಇದಲ್ಲದೆ ಸ್ಥಳೀಯವಾಗಿ ವಿಚಾರ ಮಾಡಿದಾಗ ಪಕ್ಕದ ತೋಟದಲ್ಲಿ ತೆಂಗಿನ ಮರಗಳು ಒಣಗಿಲ್ಲವೆಂದು ತಿಳಿದು ಬಂದಿದೆ. ಶ್ರೀ ಮರಡಿ ರಂಗಪ್ಪನವರು ತಮಗೆ ೧೯೮೪ರಲ್ಲಿ ಹೃದಯವೇಧನೆ ಬಂದಿತ್ತೆಂದು ಈಗ ಆರೋಗ್ಯವಾಗಿ ದೃಢಕಾಯವಾಗಿರುವರೆಂದು ಎಕ್ಸೆಕ್ಯುಟೀವ್ ಇಂಜಿನಿಯರ್‌ರವರಿಗೆ ತಿಳಿಸಿದ್ದಾರೆ. ತೆಂಗಿನ ಮರಗಳು ಒಣಗಿರುವುದು ಹೃದಯ ವೇಧನೆಗೆ ಕಾರಣವೆಂದು ಹೇಳಲಾಗುವುದಿಲ್ಲ.

ಪರಿಹಾರ ನೀಡುವ ವಿಷಯದಲ್ಲಿ ಶ್ರೀ ಮರಡಿ ರಂಗಪ್ಪನವರಿಂದ ಯಾವ ವಿಧವಾದ ಮನವಿಯು ಬಂದಿಲ್ಲ.

೧೨-೦೦ ಮಧ್ಯಾಹ್ನ

ಶ್ರೀ ಆರ್. ರಾಮಯ್ಯ.—೧೯೮೪ನೇ ಸಾಲಿನಲ್ಲಿ ಒಣಗಿದ ಮರಗಳಿಗೆ ಪರಿಹಾರ ಕೊಡಬೇಕೆಂದು ಮರಡಿ ರಂಗಪ್ಪ ಅಧ್ಯಯನ ಸಮಿತಿ ಬಂದಿದ್ದಾಗ ಅವರಿಗೂ ಅರ್ಜಿಯನ್ನು ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ನೂರಕ್ಕೆ ೩೦ ಮರಗಳು ರೋಗಕ್ಕೆ ತುತ್ತಾಗಿದ್ದು ಅವುಗಳಿಗೆ ಔಷಧಿಯನ್ನು ಸಿಂಪಡಿಸಲಾಯಿತು ಎಂದು ಹೇಳಿದ್ದಾರೆ. ರೈತರು ವೈಯಕ್ತಿಕವಾಗಿ ರೋಗವನ್ನು ತಡೆಗಟ್ಟಿದ್ದಾರೆ ೧೯೮೪ನೇ ಸಾಲಿನಲ್ಲಿ ಜಲಾಶಯದಲ್ಲಿ ನೀರು ಇಲ್ಲದೇ ಇದ್ದುದರಿಂದ ತೆಂಗಿನ ಮರಗಳು ಒಣಗಿ ಹೋಗಿವೆ. ಈಗ ಮಾನ್ಯ ಮಂತ್ರಿಗಳು ೧೯೮೫ನೇ ಸಾಲಿನ ಉತ್ತರವನ್ನು ಕೊಟ್ಟಿದ್ದಾರೆ ಒಣಗಿದಂತಹ ಮರಗಳಿಗೆ ಪರಿಹಾರವನ್ನು ಕೊಡಿಸಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಪರಿಹಾರ ಕೊಡುವ ಬಗ್ಗೆ ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಯನ ತಂಡದ ತಜ್ಞರು ಅಲ್ಲಿಗೆ ಹೋಗಿದ್ದಾಗ ನಮಗೆ ಪರಿಹಾರ ಕೊಡಬೇಕೆಂದು ಅರ್ಜಿ ಕೊಟ್ಟಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಅದನ್ನು ತರಿಸಿಕೊಂಡು ಕ್ರಮ ತೆಗೆದುಕೊಳ್ಳುವುದಕ್ಕೆ ಬರುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅದನ್ನು ನಾನು ನೋಡುತ್ತೇನೆ.

ನಿಲುವಳಿ ಸೂಚನೆ

ಮಂಗಳೂರು ಪೋರ್ಟ್‌ಟ್ರಸ್ಟ್ ಬಗ್ಗೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಮತ್ತು ಅಡ್ಯಂತಾಯ. ಉಮರಬ್ಬ ಮತ್ತು ಬೇರೆ ಬೇರೆ ಮಾನ್ಯ ಸದಸ್ಯರುಗಳು ನಿಲುವಳಿ ಸೂಚನೆಗೆ ಒಪ್ಪಿಗೆ ಕೊಡಬೇಕೆಂದು ಒಂದು ನೋಟೀಸ್ ಕಳುಹಿಸಿಕೊಟ್ಟಿದ್ದೇವೆ. ಮಾನ್ಯ ಗೃಹ ಸಚಿವರು ಸಭೆಯಲ್ಲಿದ್ದಾರೆ. ನಾವು ಪ್ರಸ್ತಾಪ ಮಾಡತಕ್ಕ ವಿಚಾರ ಅವರ ಇಲಾಖೆಗೆ ಸಂಬಂಧಪಟ್ಟಿದ್ದಾದು ಮಂಗಳೂರಿನ ಪೋರ್ಟ್ ಟ್ರಸ್ಟ್ ವಿನಿದೆ ಅದು ನಿಷೇದಿಸಿದ ಸ್ಥಳ. ಅಲ್ಲಿ ಕೆಲವು ಜನಗಳಿಂದ ಕಾರ್ಮಿಕರ ಸಂಘದ ವಿಚಾರದಲ್ಲಿ ವ್ಯತ್ಯಾಸ ಬಂದು ಚುನಾವಣೆ ನಡೆದು ಆಯಿತು. ಮಾನ್ಯ ಸದಸ್ಯರಾದ ಅಡ್ಯಂತಾಯರವರು ಐಎನ್‌ಟಿಯುಸಿ ಅಧ್ಯಕ್ಷರಿದ್ದಾರೆ. ಅವರು ನಮ್ಮ ಪಕ್ಷದ ಸದಸ್ಯರು ಹೌದು. ಐಎನ್‌ಟಿಯುಸಿ ವ್ಯಾಪ್ತಿಯಲ್ಲಿ ಬಹು ಪಾಲು ಕಾರ್ಮಿಕರಿದ್ದಾರೆ. ಪೋರ್ಟ್ ಟ್ರಸ್ಟ್‌ನಲ್ಲಿ ಯೂನಿಯನ್ ಆರ್ಗನೈಸ್ ಮಾಡಿದ್ದರು. ಅಲ್ಲಿ ಪ್ರತಿನಿತ್ಯವೂ ಕಾರ್ಮಿಕರು ಕೆಲಸ ಮಾಡಿದರೆ ದಿನಕ್ಕೆ ಲಕ್ಷಾಂತರ ರೂಪಾಯಿಗಳ ಹಣ ಕೇಂದ್ರ ಸರ್ಕಾರಕ್ಕೆ ಬರುತ್ತದೆ. ಇದರ ಮೇಲೆ ಕೇಂದ್ರ ಸರ್ಕಾರದ ಜವಾಬ್ದಾರಿಯೂ ಇದೆ, ರಾಜ್ಯ ಸರ್ಕಾರದ ಜವಾಬ್ದಾರಿಯೂ ಇದೆ. ರಾಜ್ಯಸರ್ಕಾರದ ರಕ್ಷಣೆಯನ್ನು ಅವರು ಕೇಳಿದರೆ, ಅವರಿಗೆ ರಕ್ಷಣೆ ಕೊಡತಕ್ಕ ಪ್ರಶ್ನೆ ಬರುತ್ತದೆ. ಅಲ್ಲಿ ಜನತಾ ಪಕ್ಷದವರು ಮತ್ತಿತರರು ಕಾರ್ಮಿಕರ ಬೆಂಬಲ ಗಳಿಸುವುದಕ್ಕೆ ಪ್ರಯತ್ನ ಪಟ್ಟರು. ಅವರಿಗೆ ಅಲ್ಲಿನ ಕಾರ್ಮಿಕರ ಬೆಂಬಲ ಸಿಕ್ಕಲಿಲ್ಲ. ಮೊನ್ನೆತಾನೇ ನಡೆದಂತಹ ಅನೇಕ ವಿವರ

ಗಳನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಹಾಗೂ ಪಣಂಬೂರಿನ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಅವರು ಒಳಗಡೆ ಏಕಾಏಕಿ ನುಗ್ಗಿ without the permission of the Chairman of the Port Trust, ಅವರ ಒಪ್ಪಿಗೆ ಇಲ್ಲದೆ ಕಾನೂನಿನ ಪ್ರಕಾರ ಒಳಗಡೆ ಕಾಲಿಡುವುದಕ್ಕೆ ಬರುವುದಿಲ್ಲ. ಅವರಿಗೆ ಪೋಲೀಸ್ ರಕ್ಷಣೆ ಇಲ್ಲದೇ ಇದ್ದರೂ ಬಾರ್ಡರ್ ಸೆಕ್ಯೂರಿಟಿ ಫೋರ್ಸ್ ರಕ್ಷಣೆ ಪಡೆಯತಕ್ಕ ಅಧಿಕಾರ ಅವರಿಗಿದೆ. ಪೋರ್ಟ್ ಟ್ರಸ್ಟ್‌ನವರ ಪರ್ಮಿಷನ್ ಇಲ್ಲದೆ, ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್, ಮತ್ತು ಸಬ್ ಇನ್ಸ್‌ಪೆಕ್ಟರ್ ಕೆಲವು ಗೂಂಡಾಗಳು ಅಸಿಸ್ಟೆಂಟ್ ಟ್ರಾಫಿಕ್ ಮ್ಯಾನೇಜರ್ಸ್‌ಗಳನ್ನು ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಯಾವರೀತಿ ಹೊಡೆದಿದ್ದಾರೆ ಅದರ ಗಾಯದ ಗುರುತುಗಳಿವೆ, ಅದರಫೋಟೋಗಳು ಇವೆ ಅಲ್ಲಿ ಹೋಗಿ ಹೊಡೆದು ಬಡಿದು ಬೆದರಿಕೆಯುಂಟುಮಾಡಿದ್ದಾರೆ, ಎದರಿಕೆಯ ವಾತಾವರಣವನ್ನುಂಟುಮಾಡಿದ್ದಾರೆ, ಅವರ ಪಕ್ಷಕ್ಕೆ ಅಲ್ಲಿಯ ಕಾರ್ಮಿಕರ ಬೆಂಬಲವನ್ನು ಗಳಿಸುವುದಕ್ಕೋಸ್ಕರ ಇಂತಹ ಕೆಲಸವನ್ನು ಮಾಡಿದ್ದಾರೆ. ಮಂಗಳೂರು ಪೋರ್ಟ್ ಟ್ರಸ್ಟ್‌ನ ಛೇರ್ಮನ್‌ರವರು ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಟೆಲಿಕ್ಸ್ ಮೆಸೇಜ್ ಕಳುಹಿಸಿ ವಿಷಯವನ್ನು ವಿವರಿಸಿದ್ದಾರೆ. ರಾಜ್ಯ ಸರ್ಕಾರದಿಂದ ನಮಗೆ ರಕ್ಷಣೆ ದೊರೆಯುತ್ತಿಲ್ಲ, ಅವರ ಕಡೆಯಿಂದ ನಮಗೆ ರಕ್ಷಣೆ ಕೊಡುತ್ತಿಲ್ಲ ಕೇಂದ್ರಸರ್ಕಾರ ಇದರಲ್ಲಿ ಇಂಟರ್‌ವಿನ್ ಆಗಿ ನಮಗೆ ರಕ್ಷಣೆ ಕೊಡಬೇಕು. ಟ್ರಸ್ಟ್‌ನ ಪ್ರಾಪರ್ಟಿ ಕೋಟಿಗಟ್ಟಲೆ ಇದೆ, ಅಲ್ಲಿ ಸಾವಿರಾರು ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಅವರ ಗತಿ ಏನಾಗುತ್ತದೆ ಎಂಬುದನ್ನು ಮಂಗಳೂರು ಪೋರ್ಟ್ ಟ್ರಸ್ಟ್‌ನ ಛೇರ್ಮನ್‌ರವರು ಅವರ ಇಲಾಖೆಗೆ ಬಂದು ಬಿಟ್ಟಿದ್ದಾರೆ. ಟೆಲೆಕ್ಸ್ ಮೆಸೇಜ್ ಕಳುಹಿಸಿದ್ದಾರೆ. ಕಾನೂನನ್ನು ಮುರಿದು ಅನುಮತಿಯನ್ನು ಪಡೆಯದೆ ಒಳಗಡೆ ಹೋಗಿ ಹಿಂಸೆಯನ್ನು ಕೊಟ್ಟಿದ್ದಾರೆ. ಕಾನೂನಿನ ವಿರುದ್ಧ ಪೋಲೀಸ್‌ನವರು ಕೈಹಾಕಿದ್ದಾರೆ. ಇದು ಸಣ್ಣ ವಿಚಾರವಲ್ಲ. ರಾಜ್ಯ ಸರ್ಕಾರದವರು ಪೋರ್ಟ್ ಟ್ರಸ್ಟ್‌ನ ಛೇರ್ಮನ್‌ರವರ ಒಪ್ಪಿಗೆ ಇಲ್ಲದೆ ಅವರು ಹೇಗೆ ಒಳಗಡೆ ಹೋದರು ? ಗೂಂಡಾಗಳು ಅಸಿಸ್ಟೆಂಟ್ ಟ್ರಾಫಿಕ್ ಮ್ಯಾನೇಜರ್‌ಗಳನ್ನು ಹೊಡೆದಿದ್ದಾರೆ. ಈ ಮಟ್ಟಕ್ಕೆ ರಾಜ್ಯಸರ್ಕಾರದವರು ಹೋದರೆ ಹೇಗೆ ? ಗೂಂಡಾಗಳಿಗೆ ಬೆಂಬಲ ಕೊಡತಕ್ಕದ್ದು ಸರಿಯೆ ? ಮೊದಲನೆಯದಾಗಿ ಪರ್ಮಿಷನ್ ಇಲ್ಲದೆ ಒಳಗೆ ಹೋಗಿರತಕ್ಕದ್ದು ತಪ್ಪು, ಇವರು ಈ ತರಹ ಮಾಡುವುದಾದರೆ ಕಾರ್ಮಿಕ ಸಂಘಗಳು ಹೇಗೆ ಉಳಿಯಬೇಕು ? ಕಾರ್ಮಿಕ ಸಂಘಗಳನ್ನು ಯಾವರೀತಿ ಆರ್ಗನೈಸ್ ಮಾಡಬೇಕು ? ಇದು ಜರೂರಾಗಿರತಕ್ಕ ವಿಚಾರ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳತಕ್ಕವರು ಕಾನೂನನ್ನು ಮುರಿದು ಕಾನೂನಿನ ವಿರುದ್ಧ ರಾಜ್ಯ ಸರ್ಕಾರದ ಪೋಲೀಸ್‌ನವರು ಹೋಗಿದ್ದಾರೆ. ದೂರು ಕೊಟ್ಟರೂ ಪೋಲೀಸ್‌ನವರು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಸಂಪೂರ್ಣವಾಗಿ ಬಿಟ್ಟಿದ್ದಾರೆ. ಯಾರುಯಾರು ಐಎನ್‌ಟಿಯುಸಿಗೆ ಬೆಂಬಲ ಕೊಟ್ಟಿದ್ದಾರೆ ಅವರಿಗೆಲ್ಲಾ ಹೊಡೆದರೆ, ಹಿಂಸೆ ಕೊಟ್ಟರೆ, ಬೆದರಿಸಿದರೆ ಕಾರ್ಮಿಕರು ನಮಗೆ ಬೆಂಬಲ ಕೊಡುತ್ತಾರೆಂದು ನಮ್ಮ ಸಂಘದ ಕಡೆಗೆ ಬರುತ್ತಾರೆಂದು ಆ ಉದ್ದೇಶದಿಂದ ಮಾಡಿದ್ದಾರೆ. ಅಸಿಸ್ಟೆಂಟ್ ಟ್ರಾಫಿಕ್ ಮ್ಯಾನೇಜರ್ಸ್‌ಗಳನ್ನು ಹೆದರಿಸಿದ್ದಾರೆ. ಇಲ್ಲಿ ಕಾನೂನಿನ ದುರುಪಯೋಗ ನಡೆಯುತ್ತಿದೆ. ಅದರ ವಿವರ ಬಾರಿ ಇದೆ. ಅದರ ಬಗ್ಗೆ ಸಂಬಂಧಪಟ್ಟ ಫೋಟೋಗಳು ನನ್ನಲ್ಲಿ ಇವೆ. ಇದರ ಬಗ್ಗೆ ಅಡ್ಯಂತಾಯ ಮತ್ತು ಉಮರಬ್ಬರವರು ತಿಳಿಸುತ್ತಾರೆ ಇದು ಅತಿ ಜರೂರಾಗಿರತಕ್ಕ ವಿಚಾರ ಇದನ್ನು ಏತಕ್ಕೆ ಚರ್ಚೆಗೆ ತೆಗೆದುಕೊಳ್ಳಬೇಕೆಂದರೆ ರಾಜ್ಯ ಸರ್ಕಾರದ ಪೋಲೀಸ್‌ನವರು ಕಾನೂನನ್ನು ದುರುಪಯೋಗ ಮಾಡಿಕೊಳ್ಳುತ್ತಾರೆ. ಅಲ್ಲಿ ಅಂತಹ ಒಂದು ವಾತಾವರಣ ಸೃಷ್ಟಿಯಾಗಿದೆ. ಇದು ಸಣ್ಣ ವಿಚಾರ ಅಲ್ಲ. ಕೇಂದ್ರ ಸರ್ಕಾರದ ಆಸ್ತಿಗೆ ನಷ್ಟ ಉಂಟು ಮಾಡಲಾಗಿದೆ. ಕಾನೂನನ್ನು ಮುರಿದು ಪೋಲೀಸ್‌ನವರು ವರ್ತಿಸಿದರೆ ಹೇಗೆ ? ಇದು ಜರೂರಾಗಿರತಕ್ಕ ವಿಚಾರ, ಸಾರ್ವಜನಿಕರಿಗೆ ಸಂಬಂಧಪಟ್ಟಿರತಕ್ಕ ವಿಚಾರ ಅತಿ ಮುಖ್ಯವಾದುದು. ಇದರ ಬಗ್ಗೆ ಚರ್ಚೆ ಮಾಡಲು ತಾವು ಒಪ್ಪಿಗೆ ಕೊಡಬೇಕೆಂದು ನಮ್ಮ ಅಭಿಪ್ರಾಯವನ್ನು ತಮ್ಮ ಮುಂದಿಟ್ಟಿದ್ದೇವೆ ತಾವು ಒಪ್ಪಿಗೆ ಕೊಟ್ಟ ಮೇಲೆ ಅದರ ಬಗ್ಗೆ ನಾವು ನಿರ್ಣಯ ಮುಂದಿನ ಮಾಡುತ್ತೇವೆ. ಇದರ ಬಗ್ಗೆ ಸಂಪೂರ್ಣ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ನಾನು ಕೋರುತ್ತೇನೆ.

ಶ್ರೀ ಬಿ.ಎ. ಉಮರಬ್ಬ (ವಿಟ್ಲ).—ಸನ್ಮಾನ್ಯ ಅಧ್ಯಕ್ಷರೆ, ನವ ಮಂಗಳೂರು ಬಂದರು, ಪಣಂಬೂರು, ಕರ್ನಾಟಕ ರಾಜ್ಯದ ಸಮಗ್ರ ದೃಷ್ಟಿಯಿಂದ ಬಹಳ ಪ್ರಮುಖವಾದ ಒಂದು ಮುಖದ್ವಾರ ಎಂದು ಹೇಳಬಹುದು. ಅಲ್ಲಿ ಆಗುವ ಯಾವುದೇ ವಿಘ್ನವಾನ ಉತ್ಪಾದನೆಯ ದೃಷ್ಟಿಯಲ್ಲಿ ಕೇಂದ್ರ

ಸರ್ಕಾರದ ಲಾಭ ನಷ್ಟಕ್ಕೆ ಸಂಬಂಧಪಟ್ಟಿದ್ದರೂ ಸಹ ಸರಬರಾಜಿನ ದೃಷ್ಟಿಯಲ್ಲಿ ಕರ್ನಾಟಕ ರಾಜ್ಯದ ಆಗುಹೋಗುಗಳಿಗೆ ಸಂಬಂಧಪಟ್ಟಿದ್ದು. ಆಹಾರ ಸಾಮಗ್ರಿಗಳಾಗಿರಬಹುದು ? ಸಿಮೆಂಟ್ ಆಗಿರ ಬಹುದು. ಹಾಗೂ ಎಣ್ಣೆ ಉತ್ಪಾದನೆ ಆಗಿರಬಹುದು. ಆ ಮೂಲಕ ನಮಗೆ ಆದರ ಉತ್ಪತ್ತಿ ಸಿಕ್ಕುತ್ತದೆ. ಆದ್ದರಿಂದ ಅಲ್ಲಿ ನಡೆಯುವ ವಿದ್ಯಮಾನ ಬಹಳ ಪ್ರಮುಖವಾದುದು ಎಂದು ಹೇಳಿ ಆ ಬಗ್ಗೆ ನಾವು ಗಮನಹರಿಸಬೇಕಾಗುತ್ತದೆ. ಈಗಾಗಲೇ ನಮ್ಮ ನಾಯಕರಾದ ಶ್ರೀಮಾನ್ ಬಂಗಾರಪ್ಪ ನವರು ಸಂಕ್ಷಿಪ್ತವಾಗಿ ಅಲ್ಲಿ ಏನು ನಡೆಯಿತು ಎಂದು ಹೇಳಿದ್ದಾರೆ. ಅಲ್ಲಿ ನಡೆಯುತ್ತಿರುವುದೇ ಒಂದು, ಆದರೆ ಅದಕ್ಕೆ ಒಂದು ವ್ಯಾಪಕವಾದ ಬೇರೆ ರೀತಿಯ ಪ್ರಚಾರವನ್ನು ಕೊಡುವಂತಹ ಪ್ರಯತ್ನ ಆಗು ತ್ತಿದೆ ನಿಜ. ಇತ್ತೀಚೆಗೆ ೨೪ನೇ ತಾರೀಖು ನಡೆದಂತಹ ಘಟನೆ ಇದು ಕಾನೂನು ಮತ್ತು ಶಿಸ್ತಿಗೆ ಸಂಬಂಧಪಟ್ಟಂತಹ ಘಟನೆ ನಿಜ. ಆದರೆ ಈ ಘಟನೆಯ ಹಿನ್ನೆಲೆಯನ್ನು ಆಳವಾಗಿ ನೋಡಿದಾಗ ಇದು ಇಷ್ಟಕ್ಕೆ ಸಂಬಂಧಪಟ್ಟದ್ದಲ್ಲ. ಇದರಲ್ಲಿ ಒಂದು ಆಳವಾದ ಪಿತೂರಿ ಇದೆ ಎನ್ನುವುದನ್ನು ನಾನು ಇಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಏನು ಪಿತೂರಿ ಎಂದರೆ, ನವ ಮಂಗಳೂರು ಬಂದರಿನ ಸಿದ್ಧಾಂತ ಏನಿದೆ ಎಂದರೆ, ಇದು ರಾಷ್ಟ್ರದ ೧೦ ಪ್ರಮುಖ ಬಂದರುಗಳಲ್ಲಿ ಚಿಕ್ಕ ವಯಸ್ಸಿನ ಬಂದರು. ಆದರೆ ಅಧಿಕ ಉತ್ಪಾದನೆ ಕೊಡುವಂತಹ ಹಾಗೂ ವಿಶ್ವಾಸಕ್ಕೆ ಪಾತ್ರವಾದಂತಹ ನವ ಮಂಗಳೂರು ಬಂದರು ಕೇವಲ ದಿವಸಗಳಿಂದ ಅಲ್ಲಿ ಅಶಿಸ್ತು ಕಾಡುವುದಕ್ಕೆ ಪ್ರಾರಂಭವಾಯಿತಂ. ಈ ರೀತಿಯ ಅಶಿಸ್ತನ್ನು ಕಾಡಿಸುವುದಕ್ಕೆ ಒಂದು ಗುಂಪು, ಆಪರದೇ ಆದ ಕಾರ್ಮಿಕ ಸಂಘವನ್ನು ನೂಕಿಕೊಂಡು ನಡೆಸುತ್ತಿದ್ದಾರೆ, ಅಲ್ಲಿ ಏನು ಪಿತೂರಿ ನಡೆಯುತ್ತಿದೆ ಎಂದರೆ, ಇದು ಕೇವಲ ಅಶಿಸ್ತಿನ ಪ್ರಶ್ನೆ ಅಲ್ಲ. ಕಾನೂನಿನ ಪ್ರಶ್ನೆಯಲ್ಲ. ಪಿತೂರಿ ಏನೆಂದರೆ, ನವ ಮಂಗಳೂರು ಬಂದರು ಒಂದು ಪ್ರಮುಖವಾದ ಕೇಂದ್ರ. ಯಾವ ಕಳ್ಳಸಾಗಣಿಕೆದಾರರ ಕಪಿಮುಷ್ಟಿಯಿಂದ ಇದನ್ನು ಹಿಡಿಯುವುದರ ಮೂಲಕ ತಮ್ಮ ಬವಣೆಯನ್ನು ಮುಂದುವರಿಸಿಕೊಂಡು ಹೋಗಬಹುದು ಎನ್ನುವ ಉದ್ದೇಶದಿಂದ ಇದನ್ನು ಎಬ್ಬಿಸಿದ್ದಾರೆ ಆ ಪ್ರಮುಖ ಕಳ್ಳಸಾಗಣಿಕೆದಾರ ಯಾರು ಎನ್ನುವ ಪ್ರಶ್ನೆಗೆ ನಾನೊಬ್ಬ ಉತ್ತರ ಕೊಡುವುದಿಲ್ಲ. ಅದನ್ನು ಹೇಳುವಂತಹ ಜವಾಬ್ದಾರಿ ಕರ್ನಾಟಕ ರಾಜ್ಯ ಸರ್ಕಾರದ್ದು. ಕರ್ನಾಟಕ ರಾಜ್ಯದಲ್ಲಿರುವಂತಹ ಜನತಾ ಸರ್ಕಾರ ಕಳ್ಳಸಾಗಾಣಿಕೆದಾರ ಹಾಗೂ ಕಾಪಿ ಪೋಸಾ ಕಾಯಿದೆಯ ಪ್ರಕಾರ ಗಾರುತು ಮಾಡಿ ಯಾರನ್ನು ಜೈಲಿಗೆ ಹಾಕಿಸ್ಟಿತೋ ಆ ವ್ಯಕ್ತಿ ಇವೊತ್ತು ಆ ಸಂಘದ ಉಪಾಧ್ಯಕ್ಷ ಆಗಿರುವುದಾದರೆ, ಅಂತಹವರ ಕೈಯ್ಯಲ್ಲಿ ಈ ನವ ಮಂಗಳೂರು ಬಂದರು ಬಲಿಯಾಗಬೇಕೆ ? ಅದರ ಹಸಿರು ಹಾಳಾಗಬೇಕೆ ? ನವ ಮಂಗಳೂರು ಬಂದರಿನ ಪ್ರಶ್ನೆ ಬಂದಾಗ ಅದು ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಇವರೆಡಕ್ಕೂ ಸಂಬಂಧ ಪಡುತ್ತದೆ. ಇಷ್ಟು ಮಾತ್ರವಲ್ಲ. ನವ ಮಂಗಳೂರು ಬಂದರಿನ ಕಾರ್ಮಿಕ ಸಂಘದ ಅಧ್ಯಕ್ಷನಂತಹವರು ಆಗಿರಬೇಕೇ ?

ಅಧ್ಯಕ್ಷರು.—ತಾವು ಸಂಕ್ಷಿಪ್ತವಾಗಿ ಹೇಳಿ.

(ಗೊಂದಲ)

ಶ್ರೀ ಎಸ್.ಎಂ. ಅಡ್ಯಾಂತಾಯ.—ಇದು ಕಾನೂನು ಮತ್ತು ಶಾಂತಿ ಪಾಲನೆಯ ಪ್ರಶ್ನೆಯಲ್ಲ.

ಶ್ರೀ ಬಿ.ಎ. ಉಮರಬ್ಬ.—ಕಾರ್ಮಿಕ ಚಳುವಳಿ ಎಂದರೆ, ಏನು ಎಂಬುದರ ಬಗ್ಗೆ ಹೇಳಿಕೆಯನ್ನು ಮಾನ್ಯ ಮಂತ್ರಿಗಳು ಕೆಲವು ದಿವಸಗಳ ಹಿಂದೆ ಮಾಡಿದ್ದಾರೆ. ಆ ಹೇಳಿಕೆಯಲ್ಲಿ ಅವರು ಏನು ಹೇಳಿದ್ದಾರೆಂದರೆ, ಯಾವುದೇ ಕಾರ್ಮಿಕ ಸಂಘದವರು ಕ್ಷುಲ್ಲಕ ಕಾರಣಗಳಿಗಾಗಿ ಕೈಗಾರಿಕೆಯ ಉತ್ಪಾದನೆಯ ಸ್ಥಾನವನ್ನು ಕೆಡಿಸಬಾರದು ಎನ್ನುವ ಮಾತನ್ನು ಹೇಳಿದ್ದಾರೆ, ಆದರೆ ಇವೊತ್ತು ಮಾಜಿ ಶಾಸಕರೊಬ್ಬರು ಆ ಕೆಲಸವನ್ನು ಮಾಡುತ್ತಿದ್ದಾರೆ. ಈಗ ಅವರು ಜನತಾ ಪಕ್ಷದಲ್ಲಿರುವಂತಹ ಒಬ್ಬ ವ್ಯಕ್ತಿ, ಕ್ಷುಲ್ಲಕ ಕಾರಣಗಳಿಗಾಗಿ ತಮಗೆ ಬೇಕಾದವರಿಗೆ ಫಾಸ್‌ಗಳನ್ನು ಕೊಡಿಸುವುದರ ಮೂಲಕ ನವ ಮಂಗಳೂರು ಬಂದರಿನ ಒಳಕ್ಕೆ ಹೋಗಿ, ನವ ಮಂಗಳೂರು ಬಂದರಿನಲ್ಲಿ ಅಶಿಸ್ತನ್ನು ತರುತ್ತಾರೆಂದರೆ ಏನು ಕಾರಣ? ಇವರ ಚರಿತ್ರೆಯೇ ಕಾರಣ ಎಂದು ನಾನು ಹೇಳಬೇಕಾಗುತ್ತದೆ. ಇವರು ಅಧ್ಯಕ್ಷರಾಗಬೇಕೆಂದು ಜನತಾ ಪಕ್ಷದವರು ಎಂದು ಹೇಳಿಕೊಳ್ಳತಕ್ಕಂತಹವರು ಳಿ ಜನ ಸೇರಿಕೊಂಡು ಈ ರೀತಿಯ ಕೆಲಸವನ್ನು ಅಲ್ಲಿ ಮಾಡುತ್ತಿದ್ದಾರೆ. ಆ ವ್ಯಕ್ತಿಯ ಚರಿತ್ರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಉದಯವಾಣಿ ಪತ್ರಿಕೆಯಲ್ಲಿಯೂ ಹಾಗೂ ಮುಂಗಾರು ಎಂಬ ಪತ್ರಿಕೆಗಳಲ್ಲಿ ರಾರಾಜಿಸಿದೆ, ಅದನ್ನು ನಾನು ಹೇಳಬೇಕಾದ ಅಗತ್ಯ ಇಲ್ಲ. ಇವರ ಚರಿತ್ರೆ ಏನು ಎಂದರೆ, ರಾಷ್ಟ್ರೀಯ ಹೆದ್ದಾರಿಯಲ್ಲಿ ಬೆಳಿಗ್ಗೆ ೯ ಗಂಟೆಗೆ.....

(ಗೊಂದಲ)

ಶ್ರೀ ಎಸ್.ಎಂ. ಅಡ್ಯಂತಾಯ.—ಇದು ಪ್ರಮುಖವಾದ ಪ್ರಶ್ನೆ.

ಅಧ್ಯಕ್ಷರು.—ತಾವು ಹೊಸ ಸದಸ್ಯರಿದ್ದೀರಿ. ಇದನ್ನು ನಿಲುವಳಿ ಸೂಚನೆಯ ಮೇರೆಗೆ ತೆಗೆದು ಕೊಳ್ಳುವುದಕ್ಕೆ ಅರ್ಹವಾದ ಕೇಸು ಆಗಿದೆ. ಆದ್ದರಿಂದ ಇದನ್ನು ನಿಲುವಳಿ ಸೂಚನೆಯಾಗಿ ತೆಗೆದ ಕೊಂಡು ಚರ್ಚೆಗೆ ಅವಕಾಶ ಮಾಡಿಕೊಡಬೇಕುಂಬುದರ ಬಗ್ಗೆ ಕೆಲವು ವಿವರಗಳನ್ನು ಮಾತ್ರ ಹೇಳಿ. ಈಗ ಪೂರ್ಣ ವಿವರಕ್ಕೆ ಈಗ ತಾವು ಹೋಗಬೇಡಿ. ಅದಕ್ಕೆ ಅವಕಾಶ ಕೊಟ್ಟ ಮೇಲೆ ತಾವು ಆ ಬಗ್ಗೆ ಚರ್ಚೆ ಮಾಡಬಹುದು.

ಶ್ರೀ ಬಿ ಎ. ಉಮರಬ್ಬ.—ಮಾನ್ಯ ಅಧ್ಯಕ್ಷರೆ, ಇವರು.....

ಶ್ರೀ ಜೀವರಾಜ್ ಆಳ್ವ.—ಅವರು ಮಾಜಿ ಶಾಸಕರು, ಅವರ ಜಾತಿ, ಅವರ ಕುಟುಂಬದ ಬಗ್ಗೆ, ಅವರ ಮಕ್ಕಳ ಬಗ್ಗೆ ಮಾತನಾಡುತ್ತಿದ್ದಾರೆ. ಅದಕ್ಕೆ ಇಲ್ಲಿ ಅವಕಾಶ ಇಲ್ಲ.

ಶ್ರೀ ಎಸ್. ಬಂಗಾರಪ್ಪ. – ಸಂಕ್ಷಿಪ್ತವಾಗಿ ಮಾತಾಡಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಅವರು ನಿಲುವಳಿ ಸೂಚನೆಯ ವಿಚಾರವನ್ನು ಇಲ್ಲಿ ಹೇಳುತ್ತಿದ್ದಾರೆ ಆದರೆ ಹಿಂದಿನ ಶಾಸಕರು, ಅವರ ಮಕ್ಕಳು, ಅವರ ಕುಟುಂಬ ಇವುಗಳ ಬಗ್ಗೆ ಇಲ್ಲಿ ಹೇಳಬಹುದೇ ? ಆದನ್ನು ಇಲ್ಲಿಹೇಳುವುದಕ್ಕೆ ಕಾನೂನು ಪ್ರಕಾರ ಅವಕಾಶ ಇಲ್ಲ.

ಶ್ರೀ ಎಸ್.ಎಂ. ಅಡ್ಯಂತಾಯ —ಸನ್ಮಾನ್ಯ ಸಚಿವರಾದ ಜೀವರಾಜ್ ಆಳ್ವರವರು ಎರಡು ದಿವಸ ಗಳ ಮಟ್ಟಿಗೆ ಖಾಸಗಿ ಭೇಟಿ ಎಂಬುದಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿ ಕೊಟ್ಟಿದ್ದರು.

ಶ್ರೀ ಎಸ್.ಆರ್. ಬೊಮ್ಮಾಯಿ. ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಲಿ. ಆದರೆ ಮಾಜಿ ಶಾಸಕರು, ಅವರ ಮಕ್ಕಳ ಚರಿತ್ರೆ, ಕುಟುಂಬದ ಚರಿತ್ರೆ ಅದನ್ನು ಇಲ್ಲಿ ಹೇಳುವುದಕ್ಕೆ ಅವಕಾಶ ಇಲ್ಲ, ಅವರು ಇಲ್ಲಿ ಆಗಿರುವಂತಹ ಸ್ಪೈಸಿಕ್ ಬಗ್ಗೆ ಹೇಳಲಿ. ಆದರೆ ಪೂರ್ಣ ಚರ್ಚೆಗೆ ಇನ್ನೂ ತಾವು ಅವಕಾಶ ಕೊಟ್ಟಿಲ್ಲ.

ಶ್ರೀ ಎಸ್.ಎಂ. ಅಡ್ಯಂತಾಯ.—ಆ ವ್ಯಕ್ತಿಯು ಒಬ್ಬ ಪಂಗ ಇದರ ಉಪಾಧ್ಯಕ್ಷ ಆದ್ದರಿಂದ ವಿಷಯವನ್ನು ಹೇಳಬೇಕಾಯಿತು.

ಶ್ರೀ ಎಸ್. ಬಂಗಾರಪ್ಪ.—ಅವರು ಆ ವಿಚಾರವನ್ನು ವಿತಕ್ಕೆ ಬೇಳುತ್ತಿದ್ದಾರೆಂದರೆ, ಅವರು ಆ ಸಂಘದ ಅಧ್ಯಕ್ಷರು, ಮತ್ತು ಅವರ ಮಕ್ಕಳ ಆ ಸಂಘದ ಉಪಾಧ್ಯಕ್ಷರು, ಎನ್ನತಕ್ಕಂತಹ ವಿಚಾರವನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹಿಂದಿನ ಶಾಸಕರು, ಇವೊತ್ತಿನ ಶಾಸಕರು ಅವರ ಮಕ್ಕಳ ಬಗ್ಗೆ ಹೇಳಬೇಕಾದರೆ. ಅದು ಬೇರೆ ವಿಚಾರವಾಗುತ್ತದೆ. ಅದಕ್ಕೆ ಇಲ್ಲಿ ಅವಕಾಶ ಇಲ್ಲ. ಸಂಘದ ಚಟುವಟಿಕೆಗಳ ಬಗ್ಗೆ ಹೇಳಲಿ.

ಅಧ್ಯಕ್ಷರು.—ತಾವು ಹೊಸ ಸದಸ್ಯರಿದ್ದೀರಿ. ಹೇಳುವುದನ್ನು ಸ್ವಲ್ಪ ಕಲಿಯಿರಿ ಎಂದು ಹೇಳುತ್ತಿದ್ದೇನೆ, ಸಂಕ್ಷಿಪ್ತವಾಗಿ ಹೇಳಿ. ವಿವರಗಳಿಗೆ ಹೋಗಬೇಡಿ.

ಶ್ರೀ ಬಿ.ಎ. ಉಮರಬ್ಬ.—ನಾನು ಆ ಬಗ್ಗೆ ವಿತಕ್ಕಾಗಿ ಹೇಳಿದೆ ಎಂದರೆ, ಯಾಗ್ಗುಯಾರು ಈ ಸಂಘದಲ್ಲಿ ಪದಾಧಿಕಾರಿಗಳಾಗಿದ್ದಾರೆ ಎಂಬುವರ ವಿವರ ನನ್ನಲ್ಲಿದೆ. ಅದಕ್ಕಾಗಿಯೇ ಅವರ ಹೆಸರನ್ನು ಹೇಳುತ್ತಿದ್ದೇನೆ. ಅವರೊಬ್ಬ ಸ್ಮಗ್ಲರ್. Your Government has proved that he is a smuggler ; It is not our Government. ಅವನು ಅವರ ಉಪಾಧ್ಯಕ್ಷ. ರಸ್ತೆಯಲ್ಲಿ ಗಲಾಟೆ ಮಾಡುವಂತಹ ಮತ್ತೊಬ್ಬ ಅದರ ಅಧ್ಯಕ್ಷ ದರೋಡೆ ಮಾಡುವಂತಹ ಮತ್ತೊಬ್ಬ ಅವರ ಕಾರ್ಯದರ್ಶಿ ಇಂತಹವರ ಕೈಗ ಈ ನವ ಮಂಗಳೂರು ಬಂದರು ಹೋಗಬೇಕೆ ? ಆದಕ್ಕಾಗಿಯೇ ಅವರ ಚರಿತ್ರೆಯ ಹಿನ್ನಲೆಯನ್ನು ಹೇಳಬೇಕಾಯಿತು. ಇಂತಹವರ ಕೈಗೆ ಇಪ್ಪತ್ತು ನವ ಮಂಗಳೂರು ಬಂದರು ಬಲಿಯಾಗಿ ಗೂಂಡಾಗಿರಿಗೆ ಒಳಗಾಗಿರುವಂತಹ ಸಂದರ್ಭ ಸಂಭವಿಸಿದ್ದು ಪೂರಕವಾಗಿ ಕರ್ನಾಟಕ ರಾಜ್ಯದ ಪೋಲೀಸ್ ಅಧಿಕಾರಿಗಳು ಸ್ಪಷ್ಟವಾಗಿ ಕಾಣುವ ರೀತಿ ಪಕ್ಷಪಾತದ ಧೋರಣೆಯನ್ನು ತಾಳಿದ್ದಾರೆ. ಇದು ಬಹಳ ಗಂಭೀರವಾದ ವಿಚಾರ. ಮೊನ್ನೆ ರಾತ್ರಿ ಡಿ.ವೈ.ಎಸ್.ಪಿ. ಒಬ್ಬ ಎಸ್.ಐ.

ಅವರು ಬಂದರಲ್ಲಿ ಕೆಲಸ ಮಾಡುವಂತಹ ಕೇಂದ್ರ ಸರ್ಕಾರದ ಕ್ಲಾಸ್ (೨) ದರ್ಜೆಯ ಅಧಿಕಾರಿಯಾಗಿರುವ ಅಸಿಸ್ಟೆಂಟ್ ಟ್ರಾಫಿಕ್ ಮ್ಯಾನೇಜರ್ ರವರನ್ನು ಹೊಡೆದು ಬಡಿದು ಮಾಡಿದ್ದಾರೆ.

(ಗೊಂದಲ)

ಈ ಒಂದು ವಿಚಾರ ರಾಜ್ಯದ ಮೇಲೆ ತೀವ್ರವಾದ ಪರಿಣಾಮವನ್ನು ಬೀರುತ್ತದೆ. ಆದ್ದರಿಂದ ಇದರ ಬಗ್ಗೆ ಹೆಚ್ಚಿನ ರೀತಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಎಂ. ಅಡ್ಯಂತಾಯ.—ಮಾನ್ಯ ಅಧ್ಯಕ್ಷರೆ, ನವ ಮಂಗಳೂರು ಬಂದರು ಕರ್ನಾಟಕದ ಹೆಬ್ಬಾಗಿಲು. ಇಂತಹ ನವ ಮಂಗಳೂರು ಬಂದರಿನಲ್ಲಿ ಮೊನ್ನೆ ಆಗಿರುವಂತಹ ಒಂದು ಘಟನೆಯಿಂದ ತುಂಬಲಾರದ ನಷ್ಟವಾಗಿದೆ. ಕರ್ನಾಟಕಕ್ಕೆ ಇದರಿಂದ ಬಹಳ ದೊಡ್ಡ ಆಘಾತವಾಗಿದೆ. ಇದನ್ನು ತುಂಬಿಸುವಂತಹ ಒಂದು ಪ್ರಶ್ನೆ ಇಪ್ಪೊತ್ತು ನಮ್ಮ ಮುಂದೆ ಇದೆ. ಇಂದು ನವಮಂಗಳೂರು ಬಂದರು ಉತ್ಪಾದನೆಯಲ್ಲಿ ದೇಶದಲ್ಲಿಯೇ ಒಳ್ಳೆಯ ಹೆಸರನ್ನು ಪಡೆದಂತಹ ಬಂದರಾಗಿದೆ. ಅದೇ ರೀತಿಯಲ್ಲಿ ಕಾರ್ಮಿಕರ ಕಲ್ಯಾಣದ ವಿಷಯದಲ್ಲೂ ಕೂಡ ಅತಿ ಹೆಚ್ಚಿನ ಸವಲತ್ತುಗಳನ್ನು ಒದಗಿಸಿರುವಂತಹ ಬಂದರು ಆಗಿದೆ. ನವ ಮಂಗಳೂರು ಬಂದರಿನಲ್ಲಿ ಯಾವುದೇ ಒಂದು ರೀತಿಯಲ್ಲಿ ಆ ಕೈಗಾರಿಕೆಯಲ್ಲಿ ಅಶಾಂತಿ ಇಲ್ಲದೆ ಬಹಳ ಶಾಂತಿಯಿಂದ ಮಧುರ ಭಾವನೆಯಿಂದ ಅಲ್ಲಿಯ ಕಾರ್ಮಿಕರು ಹಾಗೂ ಅಧಿಕಾರಿಗಳು ಇದ್ದಾರೆ. ಅದರ ಒಪ್ಪಂದ ಸೆಕ್ಷನ್ ೧೨(೩)ರ ಪ್ರಕಾರ ಬಂದರಿನ ಕಾರ್ಮಿಕ ಸಂಘಕ್ಕೆ ೧೫ ಸೀಟುಗಳಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚುನಾವಣೆ ನಡೆದಿದ್ದು ಅದರಲ್ಲಿ ೧೩ ಸೀಟುಗಳನ್ನು ಕಾಂಗ್ರೆಸ್ ಪಕ್ಷ ಗೆದ್ದುಕೊಂಡಿದೆ. ಕಾಂಗ್ರೆಸ್ ಪಕ್ಷದ ಐ.ಎನ್.ಟಿ.ಯು.ಸಿ. ಸಂಘ ಅಲ್ಲಿ ಸ್ಥಾಪಿತವಾಗಿದೆ ಅದನ್ನು ಸಂಪೂರ್ಣವಾಗಿ ನಿರ್ನಾಮ ಮಾಡಬೇಕೆಂಬ ಧೋರಣೆಯನ್ನು ತಾಳಿಕೊಂಡು ಕೆಲವು ಕ್ಷುಲ್ಲಕ ರಾಜಕಾರಿಣಿಗಳು, ಇದಕ್ಕೆ ಅಲ್ಲಿ ೧೦ ರಿಂದ ೪೦ ಜನರ ಗುಂಪುಗಳನ್ನು ಕಟ್ಟಿಕೊಂಡು ನವ ಮಂಗಳೂರು ಬಂದರಿನ ಹೆಬ್ಬಾಗಿಲಿನಲ್ಲಿ ಅಲಾರಿಯನ್ನು ಒಳಗಡೆ ತೆಗೆದುಕೊಂಡು ಹೋಗುವ ಸಂದರ್ಭದಲ್ಲಿ ಬಂದರಿನ ಒಳಕ್ಕೆ ಹೋಗಿ ಕಾರ್ಮಿಕರು ಹಾಗೂ ಅಲ್ಲಿಯ ಅಧಿಕಾರಿಗಳನ್ನು ಹೊಡೆದು ಬಡಿದು ಮಾಡಿದ್ದರಿಂದ ಕಳೆದ ೫೫ ದಿವಸಗಳಿಂದ ಆ ಬಂದರು ಕೆಲಸ ಮಾಡುತ್ತಿಲ್ಲ. ಈ ಒಂದು ಪರಿಸ್ಥಿತಿ ನವ ಮಂಗಳೂರು ಬಂದರಿನಲ್ಲಿ ನಿರ್ಮಾಣವಾಗಿದೆ. ಇದರ ಬಗ್ಗೆ ನವ ಮಂಗಳೂರು ಬಂದರಿನ ಅಧ್ಯಕ್ಷರು ಕೇಂದ್ರ ಸರ್ಕಾರದ ಕಾರ್ಯದರ್ಶಿಯವರಿಗೆ ಕಳುಹಿಸಿದಂತಹ ವರದಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಹಾಗೂ ಅದರ ಅಧಿಕಾರಿಗಳಿಗೆ ಯಾವುದೇ ಅಧಿಕಾರ ಇಲ್ಲವೆಂದು ಹೇಳಿದ್ದಾರಲ್ಲದೆ ಇಲ್ಲಿನ ಪೋಲೀಸರಿಂದ ಯಾವ ರೀತಿಯ ರಕ್ಷಣೆಯೂ ಕೇಂದ್ರ ಸರ್ಕಾರದ ಅಧಿಕಾರಿಗಳಿಗೆ ಸಿಕ್ಕಿಲ್ಲವೆಂದು ಟೆಲೆಕ್ ಮೆಸೇಜ್ ಕಳುಹಿಸಿದ್ದಾರೆ, ಇದು ಬಹಳ ಗಂಭೀರವಾದ ವಿಷಯ. ಸೆಂಟ್ರಲ್ ರಿಲೇಷನ್‌ಷಿಪ್, ಬಾರ್ಡರ್ ಸೆಕ್ಯೂರಿಟಿ ಫೋರ್ಸ್ ಅಥವಾ ಯಾವುದೇ ವಿಷಯದಲ್ಲಾಗಲಿ ಇದು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಒಂದು ಒಳ್ಳೆಯ ರೀತಿಯ ಸಾಮರಸ್ಯಕ್ಕೆ ತಡೆಯಾಗತಕ್ಕ ವಿಷಯವಾಗಿದೆ. ದಯವಿಟ್ಟು ಇದನ್ನು ಸಾಮಾನ್ಯ ವಿಷಯ ಎಂಬುದಾಗಿ ತೆಗೆದುಕೊಳ್ಳಬಾರದೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ, ಮೊನ್ನೆಯ ದಿವಸ ಉಮರಬ್ಬರವರು ಮತ್ತು ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಅಸಿಸ್ಟೆಂಟ್ ಟ್ರಾಫಿಕ್ ಮ್ಯಾನೇಜರ್ (ಕೇಂದ್ರ ಸರ್ಕಾರದ ಕ್ಲಾಸ್–೨ ಗೆಜೆಟೆಡ್ ಅಧಿಕಾರಿ ೯೨೦ರ ಸ್ಕೇಲಿನಲ್ಲಿರುವವರು) ಅವರನ್ನು ಕರ್ನಾಟಕ ರಾಜ್ಯ ಸರ್ಕಾರದ ಬೀಟ್ ಪೋಲೀಸ್ ಅಧಿಕಾರಿ ಬಂದು ಥಳಿಸಿ ಪೋಲೀಸ್ ವ್ಯಾನ್‌ನಲ್ಲಿ ಹಾಕಿಕೊಂಡು ಹೋಗಿ ಲಾಕ್‌ಅಪ್‌ನಲ್ಲಿ ಇಡುವುದಾದರೆ ಅದಕ್ಕೆ ಯಾವುದೇ ರೀತಿಯ ನಾರ್ಮ್ಸ್ ಇಲ್ಲವೆ ? ಯಾವ ಅಧಿಕಾರಿ ಯಾರನ್ನು ಅರೆಸ್ಟ್ ಮಾಡಬೇಕು ಎಂಬುದು ಬೇಡವೇ ? ೯೨೦ ರ ಸ್ಕೇಲಿನಲ್ಲಿರುವ ಕ್ಲಾಸ್ ೨ ಅಧಿಕಾರಿ ಸೇವಾನಿರತನಾಗಿರುವ ಸಂದರ್ಭದಲ್ಲಿ, ಅದೂ ನವ ಮಂಗಳೂರಿನ ಬಂದರಿನೊಳಗೆ ಅಲ್ಲಿನ ಅಧ್ಯಕ್ಷರ ಅನುಮತಿಯನ್ನೂ ತೆಗೆದುಕೊಳ್ಳದೆ ಅವರನ್ನು ಅರೆಸ್ಟ್ ಮಾಡಿ ಲಾಕ್‌ಅಪ್‌ಗೆ ತೆಗೆದುಕೊಂಡು ಹೋಗುವುದೆಂದರೆ ಏನು ಅರ್ಥ ? ಮಾನ್ಯ ಉಮರಬ್ಬನವರು ಹೇಳಿದಂತೆ ಕಾಫಿಪೋಸದಲ್ಲಿ ಮಾತ್ರವಲ್ಲ ಕುದುರೆಮುಖಕ್ಕೆ ಕ್ಲಾಸ್–೧ ಅಧಿಕಾರಿಗಳು ಹೋಗಿದ್ದ ಸಮಯದಲ್ಲಿ ಅವರ ಜೊತೆಯಲ್ಲಿದ್ದ ಅಸಿಸ್ಟೆಂಟ್ ಟ್ರಾಫಿಕ್ ಮ್ಯಾನೇಜರ್ ಹಾಗೂ ಐ.ಎನ್.ಟಿ.ಯು.ಸಿ.ಯ ಕಾರ್ಮಿಕ ಮುಖಂಡರನ್ನು ಪೋಲೀಸ್ ಅಧಿಕಾರಿಗಳು ಥಳಿಸಿ ಅಲ್ಲಿನ ಆಸ್ತಿಯೊಂದಕ್ಕೆ

ಸೇರಿಸಿ ಅವರಿಗೆ ಬಿದ್ದ ಪೆಟ್ಟಾಗಿದೆ ಎಂದು ಹೇಳಿದ್ದನ್ನು ಕೇಳಿರಬಹುದು. ನಂತರ ವಿಚಾರ ತಿಳಿದೊಡನೆ ಇಂಟರ್‌ನ ಕಾರ್ಯಕರ್ತರು ಹೋಗಿ ವಿಚಾರಿಸಿದಾಗ ಅವರನ್ನು ಸ್ಮಗ್ಲರ್ ಎಂದು ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಹೊಡೆದಿದ್ದಾರೆಂದು ತಿಳಿದುಬಂತು. ನವ ಮಂಗಳೂರು ಬಂದರಿನ ಅಧ್ಯಕ್ಷರು ದಕ್ಷಿಣ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ, ಪೋಲೀಸ್ ಅಧಿಕಾರಿಗಳಿಗೆ ಹಾಗೂ ಡಿ.ಐ.ಜಿ.ಗೆ ಬರೆದ ಕಾಗದದಲ್ಲಿ ಎಲ್ಲವನ್ನು ಸವಿಸ್ತಾರವಾಗಿ ತಿಳಿಸಿದ್ದಾರೆ. ಆದರೂ ಆ ಅಧಿಕಾರಿಗಳು ನವ ಮಂಗಳೂರಿನ ಬಂದರಿನ ಕಡೆಗೆ ತಿರುಗಿ ನೋಡದಂತಾಗಿದ್ದಾರೆ. ನವ ಮಂಗಳೂರಿನ ಬಂದರಿನ ಅಧ್ಯಕ್ಷರು ಹರಿಜನರು. ಮಾನ್ಯ ರಾಚಯ್ಯನವರು ಹರಿಜನರ ಬಗ್ಗೆ ಬಹಳ ಕಾಳಜಿ ಇಟ್ಟುಕೊಂಡಿರುವವರು.

ಅಧ್ಯಕ್ಷರು.—ನಾವು ಸಂಪೂರ್ಣ ಚರ್ಚೆಗೆ ಅವಕಾಶ ಕೊಟ್ಟರೆ. ಆಗ ತಾವು ಮಾತನಾಡಿ. ಈಗ ಸ್ವಲ್ಪ ಮುಂಗಿಸಿ.

ಶ್ರೀ ಎನ್. ಎಂ. ಅಡ್ಯಂತಾಯ.—ಇದು ಬಹಳ ಪ್ರಮುಖ ವಿಷಯವಾದ್ದರಿಂದ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಸ್ವಾಮಿರಾವ್.—ಇದು ಬಹಳ ಮಹತ್ವದ ವಿಚಾರ. ರಾಜ್ಯದಲ್ಲಿ ಬಹಳ ಕೆಟ್ಟ ರೀತಿಯ ವರ್ತನೆ ಮತ್ತು ಕಾರ್ಯಕ್ರಮವನ್ನು ಜನತಾ ಸರ್ಕಾರ ಮತ್ತು ಜನತಾ ಪಕ್ಷದವರು ಮಾಡಿಂತಿದ್ದಾರೆಂದು ಹೇಳಬೇಕಾಗುತ್ತದೆ. ಈಗ್ಗೆ ಒಂದೂವರೆ ತಿಂಗಳ ಹಿಂದೆ ಕಂದುರೆಮೋತಿ ಪ್ರಕರಣದಲ್ಲಿ ಹೆಂಗಸರ ಬೆತ್ತಲೆ ಮೆರವಣಿಗೆ ಆದರೆ ಇವೊತ್ತು ಮಂಗಳೂರಿನಲ್ಲಿ ಗಂಡು ಮಕ್ಕಳ ಬೆತ್ತಲೆ ಮೆರವಣಿಗೆ ಮಾಡಿದ ಫೋಟೋ ಬಂದಿದೆ. ಆದ್ದರಿಂದ, ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೇದಾಂತ ಹೆಬ್ಬಿಗೆ.—ನಾನು ಹೇಳುವುದನ್ನು ದಯವಿಟ್ಟು ಕೇಳಬೇಕು.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ರಾಚಯ್ಯನವರೇ, ಏನಾದರೂ ಹೇಳುತ್ತೀರಾ ?

ಶ್ರೀ ವೇದಾಂತ ಹೆಬ್ಬಿಗೆ.—ಕಾರ್ಮಿಕರ ವಿಷಯದಲ್ಲಿ ಏನಾಗಿದೆ ಎಂದು ಹೇಳಂವುದು ಬೇಡವೆ ? ಅವರು ಮಾತನಾಡುವಾಗ ನಾವು ಕೇಳಬೇಕು ಆದರೆ ನಾವು ಮಾತನಾಡುವುದನ್ನು ಏತಕ್ಕೆ ಕೇಳಂವುದಿಲ್ಲ?

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—ಮಾನ್ಯ ಅಧ್ಯಕ್ಷರೆ, ನವ ಮಂಗಳೂರು ಬಂದರಿನಲ್ಲಿ ಕ್ಯಾಷುಯಲ್ ಲೇಬರರ್ಸ್‌ಗೆ ಪಾಸ್‌ಇಶ್ಯೂ ಮಾಡಿ ಲಿಸ್ಟೆಡ್ ಲೇಬರರ್ಸ್‌ಗೆ ಕೊಡದೆ ಇದುದರಿಂದ ಘರ್ಷಣೆ ಆಗುತ್ತಿದೆ ಎಂದು ಪೋಲೀಸರಿಗೆ ದೂರು ಬಂದಂದ್ದರಿಂದ ಅವರು ಮಧ್ಯೆ ಪ್ರವೇಶ ಮಾಡಿದ್ದಾರೆ. ಇಲ್ಲಿ ಏನಾಗಂತ್ತಿದೆ ಎಂದರೆ ಎರಡೂ ಯೂನಿಯನ್‌ಗಳಿಗೆ ಜಗಳ ಇದೆ. ಲಿಸ್ಟೆಡ್ ಲೇಬರರ್ಸ್‌ಗೆ ಮೊದಲು ಪಾಸ್ ಕೊಡಬೇಕೆಂದೂ ನಂತರ ಕ್ಯಾಷುಯಲ್ ಲೇಬರರ್ಸ್‌ಗೆ ಕೊಡಬೇಕೆಂದು ಇದೆ. ಅವರು ಮೊದಲು ಕ್ಯಾಷುಯಲ್ ಲೇಬರರ್ಸ್‌ಗೆ ಕೊಟ್ಟಿದ್ದರಿಂದ ಗಲಾಟೆಯಾಗಿದೆ. ಈ ಯೂನಿಯನ್ ಗಳಲ್ಲಿ ಸರ್ಕಾರದ ಹಸ್ತಕ್ಷೇಪ ಏನೂ ಇಲ್ಲ. ಆದರೂ ಸದಸ್ಯರು ಇಲ್ಲದೆ ಇರಂವುದನ್ನೆಲ್ಲಾ ಹೇಳುತ್ತಿದ್ದಾರೆ. ನಾನು ಹಸ್ತಕ್ಷೇಪ ಮಾಡಂವುದಕ್ಕೆ ಅವಕಾಶ ಕೊಡುವುದಿಲ್ಲ. ನಾನು ಇಷ್ಟು ಮಾತ್ರ ಹೇಳುತ್ತೇನೆ. ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವವರು ಲಿಸ್ಟೆಡ್ ಲೇಬರರ್ಸ್ ಅವರಿಗೆ ಮೊದಲು ಪಾಸ್ ಕೊಡದೆ ಇದ್ದುದರಿಂದ ಘರ್ಷಣೆಯಾಗಿದೆ. ಅದನ್ನು ನಾನು ಕೂಲಂಕಂಷವಾಗಿ ವಿಚಾರಣೆ ಮಾಡಿಸುತ್ತೇನೆ. ಪೋಲೀಸ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್, ಡಿ. ವೈ. ಎಸ್. ಪಿ. ಯವರು ಘರ್ಷಣೆ ತಪ್ಪಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಈ ಘರ್ಷಣೆಯನ್ನು ಹಾಗೇ ಬಿಟ್ಟರೆ ಏನಾಗುತ್ತದೆಂದರೆ ಅದು ಮೊದಲೇ ಬಂದರು ಪ್ರದೇಶ, ಅಲ್ಲಿ ಕಾರ್ಮಿಕರ ಘರ್ಷಣೆ ಶುರುವಾದರೆ ಅದನ್ನು ತಡೆಗಟ್ಟುವುದು ಬಹಳ ಕಷ್ಟವಾಗುತ್ತದೆ. ಈ ದಿಸೆಯಲ್ಲಿ ಸದಸ್ಯರು ಆರೋಪಣೆಗಳನ್ನು ಮಾಡಿ ಸರ್ಕಾರ ಹಸ್ತಕ್ಷೇಪ ಮಾಡುತ್ತದೆಂದು ಹೇಳಿದ್ದಾರೆ. ಸರ್ಕಾರ ಹಸ್ತಕ್ಷೇಪ ಮಾಡಿಲ್ಲ, ಬಂದರಿನಲ್ಲಿ ಸಬ್ ಇನ್ಸ್‌ಪೆಕ್ಟರ್ ಮತ್ತು ಡಿ.ವೈ.ಎಸ್.ಪಿ.ಯವರು ಮಂದಿವ ಘಟನೆ ಆಗದಂತೆ ತಡೆಗಟ್ಟಿದ್ದಾರೆ. ಆಲ್ಲದೆ ಇವತ್ತು ಯಾರು ಲಿಸ್ಟೆಡ್ ವರ್ಕರ್ಸ್ ಇದ್ದಾರೆ ಅವರಿಗೆ ಪ್ರವೇಶಾವಕಾಶ ಕೊಟ್ಟರೆ ಘರ್ಷಣೆ ಆಗಂವುದಿಲ್ಲ

ವೆಂದು ಪೋಲೀಸ್ ವರದಿಯಿಂದ ನನಗೆ ತಿಳಿದು ಬಂದಿದೆ. ಕಾರ್ಮಿಕ ಸಂಘಗಳು ಇರುವ ಕಡೆಗಳಲ್ಲಿ ಸಾಮಾನ್ಯವಾಗಿ ಇಂಥ ಘಟನೆಗಳು ಆಗಾಗ್ಗೆ ನಡೆಯುತ್ತಿರುತ್ತದೆ. ಅಂಥ ಕಡೆ ಪೋಲೀಸರು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದು ಇತ್ತೀಚೆಗೆ ನಡೆದಂಥ ಘಟನೆ.

ಶ್ರೀ ಕೆ. ಹೆಚ್. ಪಾಟೀಲ್.—ಪೋಲೀಸ್ ಅಧಿಕಾರಿಗಳು ಕೇಂದ್ರ ಸರ್ಕಾರದ ಅಧಿಕಾರಿಗಳನ್ನು ಹೊಡೆದಿದ್ದಾರೆಂದು ಹೇಳುತ್ತಾರೆ ಇದು ನಿಜವೆ ? ನಿಜವಿದ್ದರೆ ಅವರ ಮೇಲೆ ಯಾವ ಕ್ರಮ ತೆಗೆದುಕೊಂಡಿದ್ದೀರಿ ? ವರದಿ ಕೊಡುವುದು ಅಷ್ಟೇ ನಿಮ್ಮ ಕೆಲಸವೆ ? ಅಧಿಕಾರಿಗಳನ್ನು ಹೊಡೆದರೆ ಅದು ಕಾಗ್‌ನಿಸಬಲ್ ಅಫೆನ್ಸ್ ಅಲ್ಲವೇ ?

೧೨-೩೦ ಪಿ.ಎಂ.

ಶ್ರೀ ಬಿ. ರಾಚಯ್ಯ.— ತಾವು ಕೇಂದ್ರ ಸರ್ಕಾರದ ಅಧಿಕಾರಿಗಳನ್ನು ಹೊಡೆದಿದ್ದಾರೆ ಎಂದು ಹೇಳಿದ್ದೀರಿ. ನಾನು ಅದನ್ನು ವಿಚಾರ ಮಾಡುತ್ತೇನೆ. ನಾನು ಈ ಒಂದು ವರದಿಯನ್ನು ಕೊಡುವುದರಿಂದ ನ್ಯಾಯ ಕೊಟ್ಟ ಹಾಗೆ ಆಗಲಿಲ್ಲ ಎಂದು ಹೇಳಿರುವುದರಿಂದ ಮತ್ತೆ ನಾನು ಅದನ್ನು ವಿಚಾರಣೆ ಮಾಡುತ್ತೇನೆ, ಏತಕ್ಕೆಂದರೆ ಒಬ್ಬ ಈ ಘಟನೆಗೆ ಸಂಬಂಧಪಡದೆ ಇರುವುದರಿಂದ ನಾನು ಮತ್ತೆ ಅದನ್ನು ವಿಚಾರಣೆ ಮಾಡಿಸಿ ಒಂದು ವರದಿಯನ್ನು ಕೊಡುತ್ತೇನೆ. ತಾವು ಈ ಬಗ್ಗೆ ಇಷ್ಟು ವಂಬಿಕೆ ಇಟ್ಟುಕೊಳ್ಳಿ. ನಾನು ಪಕ್ಷಾತೀತವಾಗಿ ನೋಡುತ್ತಿದ್ದೇನೆಯೇ ವಿನಹ, ನೀವು ಇದ್ದರೂ ಅಷ್ಟೇ, ಬೇರೆಯವರು ಬಂದರೂ ಅಷ್ಟೆ ನನ್ನ ಕೆಲಸ ಏನೆಂದರೆ ಅಲ್ಲಿ ಘಟನೆಗಳು ನಡೆದು ಅನಾಹುತ ಆಗಬಾರದು, ಶಾಂತಿ ಪರಿಪಾಲನೆ ಮಾಡಬೇಕು, ಅದು ನಮ್ಮ ಕರ್ತವ್ಯ. ಇದಕ್ಕಾಗಿ ನಿಮ್ಮ ಸಹಕಾರವೂ ಬೇಕು, ಬೇರೆಯವರ ಸಹಕಾರವೂ ಸಹ ಬೇಕು. ವಿಷಯ ವಿಷಯಗಳನ್ನು ನಾನು ಹೇಳುವುದು ಅಗತ್ಯವಿಲ್ಲ ಎಂದು ತಾನು ತಿಳಿದು ಕೊಂಡಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಸನ್ಮಾನ್ಯ ಅಧ್ಯಕ್ಷರೇ, ನಾವು ಬಹಳ ಕೂಲಂಕುಷವಾಗಿ ಮಾನ್ಯ ಸಚಿವರ ಉತ್ತರವನ್ನು ಕೇಳುತ್ತಾ ಇದ್ದೆವು. ಇದರಲ್ಲಿ ಬಹಳ ಪ್ರಾಮುಖ್ಯವಾದುದು ಕಾರ್ಮಿಕರ ಮಧ್ಯೆ ಇರುವ ಘರ್ಷಣೆ. ಎರಡನೆಯದು, ಈ ವಿಚಾರದಲ್ಲಿ ನಾವು ಹಸ್ತಕ್ಷೇಪ ಮಾಡುವುದಿಲ್ಲ ಎನ್ನುವ ವಿಚಾರವನ್ನು ಹೇಳಿದರು. ಇದು ಸಮರ್ಪಕವಾದಂತಹ ಉತ್ತರ ಅಲ್ಲ. ಈ ನಿಲುವಳಿ ಸೂಚನೆಯಲ್ಲಿ ಬಹಳ ಮೂಲಭೂತವಾದಂತಹ ವಿಚಾರಗಳು ಇರುವುದರಿಂದ ನಮ್ಮ ವಿರೋಧಪಕ್ಷದ ನಾಯಕರು ಮತ್ತು ಸನ್ಮಾನ್ಯ ಸದಸ್ಯರು ಈ ವಿಚಾರವನ್ನು ಎತ್ತಿದ್ದಾರೆ. ಇದರ ಪ್ರಾಮುಖ್ಯತೆ ವಿಚಾರ ಬಹುಶಃ ತಮಗೆ ಸರಿಯಾಗಿ ಮನವರಿಕೆ ಮಾಡಿಕೊಳ್ಳುವ ವಿಚಾರವೇ ಅಲ್ಲ. ಏತಕ್ಕೆಂದರೆ ಇದು ಅಷ್ಟು ಗಂಭೀರವಾದುದು ಮತ್ತು ಗಮನೀಯವಾದುದು ಮತ್ತು ಈ ವಿಷಯ ಈ ಸದನದಲ್ಲಿ ಚರ್ಚೆಯಾಗಬೇಕಾದಂತಹ ಒಂದು ಅವಶ್ಯಕ ವಸ್ತು ಕೂಡ ಆಗಿದೆ. ಮೂಲಭೂತವಾದ ಒಂದ ವಿಚಾರವನ್ನು ಅವರು ಎತ್ತಿದ್ದಾರೆ. ಅದು ಏನೆಂದರೆ ಮಂಗಳೂರು ಬಂದರಿನ ಅಧ್ಯಕ್ಷರು ಕೇಂದ್ರ ಸರ್ಕಾರಕ್ಕೆ ಒಂದು ಟೆಲಿಕ್ಸ್ ಮೆಸೇಜನ್ನು ಕಳುಹಿಸಿದ್ದಾರೆ. ಇಲ್ಲಿ ಆಡಳಿತ ನಿರ್ವಹಣೆ ಮಾಡುವುದಕ್ಕೆ ಸಾಧ್ಯವಿಲ್ಲ, ರಾಜ್ಯ ಸರ್ಕಾರದ ಪೋಲೀಸ್ ಅಧಿಕಾರಿಗಳ ಹಸ್ತಕ್ಷೇಪ ಮಾಡಿದ್ದಾರೆ. ಇನ್ನಿ ದಿನನಿತ್ಯದ ಚಟುವಟಿಕೆಗಳನ್ನು ಮಾಡುವುದಕ್ಕೆ ಅವರು ಬಿಡುತ್ತಿಲ್ಲ ಎಂದು ನೇರವಾಗಿ ಅವರು ಆಪಾದನೆ ಮಾಡಿ ಅಡಿಷನಲ್ ಸೆಕ್ರೆಟರಿಗೆ ಕೇಂದ್ರಕ್ಕೆ ಅರ್ಜಿ ಹಾಕಿದ್ದಾರೆ. ಇದು ಬಹಳ ಪ್ರಾಮುಖ್ಯವಾದಂಥ ವಿಚಾರ. ಸರ್ಕಾರದವರು ಹಸ್ತಕ್ಷೇಪ ಮಾಡುವುದಿಲ್ಲ ಎಂದು ಏನೂ ಹೇಳಿಲ್ಲ, ಇದು ಆ ಪ್ರಶ್ನೆ ಅಲ್ಲ. ಇದಕ್ಕೆ ಸಾಕಷ್ಟು ಹಿನ್ನೆಲೆ ಕೂಡ ಇದೆ. ಮೂರು ನಾಲ್ಕು ತಿಂಗಳಿಂದ ಕೂಡ ಬಂದರು ಮುಚ್ಚಿ ಹೋಗಿದೆ. ಇದು ಕಾರ್ಮಿಕರ ಮಧ್ಯೆ ಇರತಕ್ಕಂಥ ಪ್ರಶ್ನೆ ಅಲ್ಲ.

ಮಂಗಳೂರು ಬಂದರು ಅಧಿಕಾರಿಗಳಿಗೆ ಸರಿಯಾದಂಥ ಸೂಕ್ತ ರಕ್ಷಣೆಯನ್ನು ಕೊಟ್ಟು ಚಟುವಟಿಕೆ ನಡೆಯುವ ಹಾಗೆ ಮಾಡತಕ್ಕಂಥದ್ದು ನಿಮ್ಮ ಕರ್ತವ್ಯ ಏತಕ್ಕೆಂದರೆ ಮಂಗಳೂರು ಬಂದರು ಕರ್ನಾಟಕ ರಾಜ್ಯದಲ್ಲಿಯೇ ಇದೆ. ಇದು ಕೇಂದ್ರದ ಆಡಳಿತದಲ್ಲಿ ಇಲ್ಲ. ಇದಕ್ಕೆ ತಾವು ಸರಿಯಾದಂಥ ಉತ್ತರ ಕೊಟ್ಟಿಲ್ಲ ಎಂದು ನಾನು ಹೇಳುತ್ತೇನೆ. ಮಂಗಳೂರಿನ ಬಂದರಿನ ಅಧ್ಯಕ್ಷರು ನೇರವಾಗಿ ಆಪಾದನೆ ಮಾಡಿದ್ದಾರೆ. ಇದರಲ್ಲಿ ಕಾರ್ಮಿಕರ ಪ್ರಶ್ನೆ ಉಳಿದಿಲ್ಲ. ಇದರಲ್ಲಿ ನಡೆದಂತಹ ವಿಚಾರ ಅಸಿಸ್ಟೆಂಟ್ ಟ್ರಾಫಿಕ್ ಇನ್ಸ್‌ಪೆಕ್ಟರನ್ನು ಪೋಲೀಸಿನವರು ಹೊಡೆದಿದ್ದಾರೆ. ಇದರ ಬಗ್ಗೆ ಕೇಸ್ ರಿಜಿಸ್ಟರ್ ಆಗಿದೆ ಎನ್ನತಕ್ಕಂಥ ಉತ್ತರವನ್ನು ನೀವು ಕೊಡುತ್ತೀರಿ ಎಂದು ನಾನು ನಿರೀಕ್ಷಣೆ ಮಾಡಿದ್ದೆ. You will have to

register a case and keep that officer under suspension immediatly. ಆವರನ್ನು ಸಸ್ಪೆನ್ಸನ್ ಏನೂ ಮಾಡಿಲ್ಲ. ತಾವು ಹಸ್ತಕ್ಷೇಪ ಮಾಡುವುದಿಲ್ಲ ಎಂದು ಹೇಳಿದ್ದೀರಿ. ಆದರೆ ಪೋಲೀಸಿನವರು ಬಂದರಿನ ಒಳಗೆ ಹೋಗಿ ಅಧಿಕಾರಿಗಳನ್ನು ಹೊಡೆಯಂಬಹುದೇ. ಗಾಯಪಡಿಸಬಹುದು ತಮಗೆ ಹೇಳಬೇಕಾದರೆ ಇವತ್ತಿನ ದಿವಸ ಸಾಮಾನ್ಯವಾಗಿ ಒಬ್ಬ ನಾಗರೀಕರನ್ನು ಕೂಡ ಹೊಡೆಯುವುದಕ್ಕೆ ಪೋಲೀಸಿನವರಿಗೆ ಅಧಿಕಾರ ಇಲ್ಲ ಇದರ ಬಗ್ಗೆ ಮಂಗಳೂರು ಬಂದರಿನ ಅಧ್ಯಕ್ಷರು ನೇರವಾಗಿ ಆಪಾದನೆ ಮಾಡಿದ್ದಾರೆ. ಅಸಿಸ್ಟೆಂಟ್ ಟ್ರಾಫಿಕ್ ಇನ್ಸ್‌ಪೆಕ್ಟರ್‌ನ್ನು ಪೋಲೀಸಿನವರು ಹೊಡೆಯುವುದಕ್ಕೆ ಹೋಗಿದ್ದಾರೆ. ಇದು ಬಹಳ ಪ್ರಾಮುಖ್ಯವಾದಂಥ ವಿಚಾರ. ಇದು ಕಾರ್ಮಿಕ ಸಂಘಗಳ ಮಧ್ಯದಲ್ಲಿ ಆಗಿರುವ ಘರ್ಷಣೆ ಎಂದು ಯಾವುದೇ ಕಾರಣವನ್ನು ಮುಂದೊಡ್ಡಿ ಗಂಭೀರವಾಗಿ ನೇರವಾದ ಆಪಾದನೆ ಮಾಡಿ ಇದನ್ನು ಮುಚ್ಚಿಡತಕ್ಕಂಥ ಪ್ರಯತ್ನವನ್ನು ಮಾಡಿರತಕ್ಕಂಥದ್ದು ಬಹಳ ಶೋಚನೀಯ. ಈಗ ತಾವು ಏನು ಉತ್ತರ ಕೊಟ್ಟಿದ್ದೀರಿ ಇದರ ಬಗ್ಗೆ ನನಗೆ ಅನಿಸುವುದೇನೆಂದರೆ ಈ ನಿಲುವಳಿ ಸೂಚನೆ ಪ್ರಕಾರ ಇದರ ಬಗ್ಗೆ ಇಲ್ಲಿ ಚರ್ಚೆಯಾಗಲೇಬೇಕು. ಇವತ್ತು ದಿನನಿತ್ಯ ಕೇಂದ್ರ ಸರ್ಕಾರದ ಮಧ್ಯೆ ಸಾಮರಸ್ಯ ಉಂಟಾಗಿರುವುದರಿಂದ ಈ ಪ್ರಶ್ನೆಯನ್ನು ನಾವು ಎತ್ತಬೇಕಾಗಿದೆ. ಕಾಲು ಕೆರೆದು ಜಗಳ ಮಾಡತಕ್ಕಂಥಾದ್ದು ಯಾರಿಗೂ ಸರಿಯಲ್ಲ. ಕೇಂದ್ರ ಸರ್ಕಾರದ ಆಡಳಿತ ಇರತಕ್ಕಂಥ ಇಲಾಖೆಗೆ ರಕ್ಷಣೆ ಕೊಡಲಿಕ್ಕೆ ನಿಷ್ಪಕ್ಷಪಾತವಾಗಿ ಕೈಯಲ್ಲಿ ಆಗದೇ ಹೋದರೆ ತಾವು ಕೈಮುಗಿದು ರಕ್ಷಣೆ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿಬಿಡಿ ಅವರಿಗೆ ಸರಿಯಾದ ರಕ್ಷಣೆ ಇಲ್ಲ ಆದ್ದರಿಂದ ಮಂಗಳೂರು ಬಂದರಿನ ಒಂದು ಆಪಾದನೆ ತಮಗೆ ತಲೆ ಮೇಲೆ ಇರುವುದರಿಂದ ಇದರ ಬಗ್ಗೆ ಸ್ಪಷ್ಟವಾದ ವಿವರಗಳನ್ನು ನಾವು ಕೊಡಲಿಕ್ಕೆ ಇದರ ಬಗ್ಗೆ ಚರ್ಚೆಯಾಗಲೇಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ — ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ಕೆಲವು ವಿಚಾರಗಳನ್ನು ನಾವು ಪ್ರಸ್ತಾಪ ಮಾಡಿದ್ದೇವೆ. ವಿವರಗಳು ಇನ್ನೂ ಇವೆ. ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಆ ವಿವರಗಳನ್ನು ಈ ಸದನದ ಮುಂದೆ ಇಡುತ್ತೇವೆ. ಶ್ರೀ ಉಮಾರಬ್ಬನವರು ಹೆಚ್ಚಿನ ವಿವರಗಳನ್ನು ಹೇಳುವುದಕ್ಕೆ ಹೋಗಿಲ್ಲ ಚರ್ಚೆಗೆ ಅವಕಾಶ ಮಾಡಿಕೊಡುವುದಕ್ಕೆ ತಾವು ಒಪ್ಪಿಗೆಯನ್ನು ಕೊಟ್ಟಮೇಲೆ ಎಲ್ಲಾ ವಿವರಗಳನ್ನು ಇಡಬೇಕಾಗುತ್ತದೆ. ತಮಗೆ ಹೇಳಬೇಕಾದರೆ ಇದರ ಬಗ್ಗೆ ಒಬ್ಬೊಬ್ಬರು ಒಂದೊಂದುಗಂಟೆ ಮಾತನಾಡಬಹುದು. ಅಷ್ಟು ಬೇಕಾದಷ್ಟು ವಿಷಯಗಳು ಇವೆ. ಉದಾಹರಣೆಗೆ ಮಾನ್ಯ ವೀರಪ್ಪ ಮೊಯ್ಲಿಯವರು ಒಂದು ಮಾತನ್ನು ಹೇಳಿದರು. ತಾವು ಕೇಂದ್ರ ಸರ್ಕಾರದವರು ಯಾವಾಗಲೂ ಮಂಜೂರು ಮಾಡಿಲ್ಲ, ಮಂಜೂರುಮಾಡಿಲ್ಲ, ಎಂದು ಹೇಳುತ್ತಿರಿ ಯಾವ ಕೈಗಾರಿಕೆಗೆ ಆಗಲೀ, ಅವರು ಕೊಟ್ಟಿರತಕ್ಕಂಥದನ್ನು ಉಳಿಸಿಕೊಳ್ಳುವುದಕ್ಕೆ ತಕ್ಕ ಬುದ್ಧಿವಂತಿಕೆ ಈ ಸರ್ಕಾರಕ್ಕೆ ಇಲ್ಲದೆ ಹೋದರೆ ಆದರ ಬಗ್ಗೆ ಕಾರ್ಯಕ್ರಮ ಏತಕ್ಕೆ ಹಾಕಿಕೊಳ್ಳುತ್ತೀರಿ? ಮಂಗಳೂರು ಪೋರ್ಟ್ ಟ್ರಸ್ಟ್ ಥೇರ್ಮಾನ್ ಶಿಳಿಸಿದರು. ಇದರಲ್ಲಿ ರಾಜ್ಯ ಸರ್ಕಾರದ ಹಸ್ತಕ್ಷೇಪ ಇದೆ. ನಾವು ಕೆಲಸ ಮಾಡುವುದಕ್ಕಾಗುವುದಿಲ್ಲ. ಇದರಲ್ಲಿ ರಾಜ್ಯ ಸರ್ಕಾರದ ಪಾತ್ರ ಬಹಳ ದೊಡ್ಡದಿದೆ ಎಂದು ಬರೆದಿದ್ದಾರೆ. ಇದು ಬಹಳ ಗಂಭೀರವಾದಂತಹ ದೊಡ್ಡದಾದಂತಹ ವಿಚಾರ. ಇವೊತ್ತಿನ ದಿವಸ ಕೇಂದ್ರ ಸರ್ಕಾರಕ್ಕೂ ಮತ್ತು ನವಂಗೂ ಘರ್ಷಣೆ ಬರಬಾರದು. ಪೋಲೀಸಿನವರು ಅವರನ್ನು ಹೊಡೆದರೂ ಸರಿ ಅವರ ಮೇಲೆ ಯಾವ ರೀತಿಯಾದಂಥ ಕ್ರಮವೂ ಇಲ್ಲ ಆ ಅಧಿಕಾರಿಯ ಸಸ್ಪೆನ್ಸನ್ ಇಲ್ಲ. ನನ್ನ ಹತ್ತಿರ ಫೋಟೋ ಇದೆ. ತಮಗೆ ಬೇಕಾದರೆ ಕಳುಹಿಸಿಕೊಡುತ್ತೇನೆ. ಫ್ಯಾಕ್ಟರ್ ಆಗಿರತಕ್ಕಂಥದ್ದು ಮತ್ತು ಮೈ ತುಂಬಾ ಪೆಟ್ಟಾಗಿರುವುದನ್ನು ಅದರಲ್ಲಿ ನೋಡಬಹುದು. ಅವರು ಕಂಪ್ಲೇಂಟ್ ಕೊಟ್ಟಿದ್ದರೂ ಸಹಾ ಅದನ್ನು ರಿಜಿಸ್ಟರ್‌ಮಾಡಾವುದಕ್ಕೆ ಪೋಲೀಸರಿಂದ ಆಗಿಲ್ಲ. ನಿಷ್ಪಕ್ಷಪಾತವಾಗಿ ಕೈಯಲ್ಲಿ ಆಗದೇ ಹೋದರೆ ಅವರು ಕೇಂದ್ರ ಸರ್ಕಾರಕ್ಕೆ ಬರೆದು ಸೇನೆಯನ್ನೋ ರಿಸರ್ವ್ ಪೋಲೀಸ್‌ನವರನ್ನೋ ಕರೆಯಿಸಿ ರಕ್ಷಣೆ ಮಾಡಿಕೊಳ್ಳುವ ಪರಿಸ್ಥಿತಿ ಬಂದರೆ ಈ ಸರ್ಕಾರ ಏತಕ್ಕೆ ಇರಬೇಕು. ಇದು ಸಣ್ಣ ವಿಚಾರ ಅಲ್ಲ. ಕಾರ್ಮಿಕರನ್ನು ಹೊಡೆದಿದ್ದಾರೆ ಇಷ್ಟಾದರೂ ಏನೂ ಕ್ರಮ ತೆಗೆದುಕೊಂಡಿಲ್ಲ. ರಾಜ್ಯ ಸರ್ಕಾರದವರು ಕಾನೂನು ದುರುಪಯೋಗ ಮಾಡಿದ್ದಾರೆ. ಇದು ನೇರದಾದ ಆಪಾದನೆ. ಇದರ ಬಗ್ಗೆ ಒಂದು ಕೇಸ್ ರಿಜಿಸ್ಟರ್ ಆಗಿಲ್ಲ. ಇದರ ಬಗ್ಗೆ ಇನ್ನೂ ಹಲವಾರು ವಿಚಾರಗಳು ಇವೆ. ಆದ್ದರಿಂದ ಮಾನ್ಯ ಅಧ್ಯಕ್ಷರು ದಯಮಾಡಿ ಈ ನಿಲುವಳಿ ಸೂಚನೆಗೆ ಅಂಗೀಕಾರ ಕೊಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ. — ಅವರು ಪೂರ್ಣ ಚರ್ಚೆ ಮಾಡಬೇಕಾದರೆ ಮಾಡಲಿ. ನನ್ನದೇನೂ ಅಬ್ಜೆಕ್ಷನ್ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಈಗಲೇ ಪ್ರಾರಂಭ ಮಾಡೋಣ.

ಅಧ್ಯಕ್ಷರು.—ಮಾನ್ಯ ಸಚಿವರು ಹೇಳಿದ ತಕ್ಷಣ ಅನುಮತಿ ದೊರೆಯಿತು ಎಂದಲ್ಲ. ಅದಕ್ಕೆ ಅನುಮತಿ ಕೊಡುವುದು ಬಿಡುವುದು ನನ್ನ ನಿರ್ಧಾರಕ್ಕೆ ಬಿಟ್ಟದ್ದು.

(ಗೊಂದಲ)

ಅಧ್ಯಕ್ಷರು.—ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಈ ಸಂದರ್ಭದಲ್ಲಿ ನಾನು ಮಾನ್ಯ ರಾಚಯ್ಯನವರನ್ನು ಅಭಿನಂದಿಸುತ್ತೇನೆ. ಸರ್ಕಾರ ಚರ್ಚೆಗೆ ಸಿದ್ಧವಾಗಿದೆ ಎಂದು ಹೇಳಿರುವುದು ಬಹಳ ಸಂತೋಷ ಇನ್ನು ಉಳಿದಿರತಕ್ಕಂಥದ್ದು ತಮ್ಮ ಹತ್ತಿರ ಈ ನಿಲುವಳಿ ಸೂಚನೆಗೆ ಒಪ್ಪಿಗೆ ಕೊಡತಕ್ಕಂಥದ್ದು.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ರಾಚಯ್ಯನವರಿಗೆ ಸ್ಟೇಟ್‌ನಲ್ಲಿರುವ ಕೇಂದ್ರ ಸರ್ಕಾರದ ಕೈಗಾರಿಕೆಗಳ ಬಗ್ಗೆ ಕಳಕಳಿ ಇದೆ.

ಅಧ್ಯಕ್ಷರು,—ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ. ಎಚ್. ಪಾಟೀಲ್.—ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಕೇಂದ್ರ ಸರ್ಕಾರದ ಮೇಲೆ ಅವರು ಈ ರೀತಿ ಮಾಡುತ್ತಾ ಹೋದರೆ ಇಲ್ಲಿ ಕೇಂದ್ರ ಸರ್ಕಾರದ ಕೈಗಾರಿಕೆಗಳು ಏನಿವೆ ಅವನ್ನು ಹೇಗೆ ನಡೆಸಂವುದಕ್ಕೆ ಆಗುತ್ತದೆ ?

ಅಧ್ಯಕ್ಷರು.—ತಾವು ದಯವಾಡಿ ಕುಳಿತುಕೊಳ್ಳಿ. ನಾನು ಎರಡೂ ಕಡೆಯ ಮಾದವನ್ನು ಕೇಳಿದ್ದೇನೆ. ರೂಲ್ ೬೮ರ ಪ್ರಕಾರ ಚರ್ಚೆಗೆ ಅವಕಾಶವನ್ನು ನಾಳೆಯಾಗಲೀ ನಾಡಿದ್ದಾಗಲೀ ಮಾಡಿಕೊಡುತ್ತೇನೆ. ರೂಲ್ ೬೯ರ ಪ್ರಕಾರ ಕೇಳಿರುವ ಅನುಮತಿಯನ್ನು ನಿರಾಕರಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅದು ಆಗುವುದಿಲ್ಲ.

ಅಧ್ಯಕ್ಷರು —ರೂಲ್ ೬೮ರ ಪ್ರಕಾರ ಅವಕಾಶ ಮಾಡಿಕೊಟ್ಟಿದ್ದೇನೆ. ಚರ್ಚೆಗೆ ಅವರೂ ತಯಾರಾಗಬೇಕು, ನೀವೂ ತಯಾರಾಗಬೇಕು. ಇಬ್ಬರೂ ತಯಾರಾದರೆ ಮಧ್ಯಾಹ್ನ ಆಗಲೀ ನಾಳೆಯಾಗಲೀ ನಾಡಿದ್ದಾಗಲೀ ಅವಕಾಶ ಕೊಡುತ್ತೇನೆ. ಅಷ್ಟು ಹೊತ್ತಿಗೆ ನೀವೂ ತಯಾರಾಗಿರಿ ಅವರೂ ನೋಡಿಕೊಳ್ಳಲಿ.

ಶ್ರೀ ಎಸ್. ಬಂಗಾರಪ್ಪ.—ರೂಲ್ ೬೮ರ ಪ್ರಕಾರ ಒಪ್ಪಿಗೆ ಕೊಟ್ಟಿದ್ದು ನಮಗೆ ದೊಡ್ಡ ಕಷವಾಗಿದೆ.

ಅಧ್ಯಕ್ಷರು,—ಯಾವಾಗ ಚರ್ಚೆಗೆ ತಗೆದುಕೊಳ್ಳಬೇಕೆಂಬುದನ್ನು ಅವರನ್ನೂ ಕೇಳಿ ಹೇಳುತ್ತೇನೆ. ನಾಳೆ ನಾಡಿದ್ದರಲ್ಲಿ ಇಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನೀವು ರೂಲ್ ೬೮ರಲ್ಲಿ ಅವಕಾಶ ಕೊಟ್ಟಿರುವುದನ್ನು ಒಪ್ಪಿದ್ದೇವೆ ಎಂಬ ಪ್ರಶ್ನೆಯಲ್ಲ.

ಅಧ್ಯಕ್ಷರು.—ಒಪ್ಪದಿದ್ದರೂ ನಾನು ಅವಕಾಶ ಮಾಡಿಕೊಟ್ಟಿದ್ದೇನೆ. in the best interest of the House, in the best interest of the Members or in the best interest of the Government or in the best interest of the existence of democray.

ಶ್ರೀ ಎಸ್. ಬಂಗಾರಪ್ಪ —ಸಂತೋಷ ಏನು ವಿಚಾರ ಎಂದರೆ ನಿಲುವಳಿ ಸೂಚನೆಗೆ ಒತ್ತಾಯಿಸಿ ಮಾಡಿ ಅವರೂ ಚರ್ಚೆಗೆ ಸಿದ್ಧವಾಗಿರಬೇಕಾದರೆ ೬೮ರ ಪ್ರಕಾರ ಏತಕ್ಕೆ ಅವಕಾಶ ಮಾಡಿದ್ದೀರಿ ?

ಅಧ್ಯಕ್ಷರು.—ಕೋರ್ಟ್‌ನಲ್ಲಿ ನೀವೂ ವಕಾಲತ್ತು ಮಾಡಿದ್ದೀರಿ ನಾವೂ ವಕಾಲತ್ತು ಮಾಡಿದ್ದೇವೆ ಅಲ್ಲಿ ಹೇಗೆ ನಡೆಯುತ್ತದೆಂಬುದು ಗೊತ್ತು.

ಶ್ರೀ ಎಸ್. ಬಂಗಾರಪ್ಪ.—ಇದು ಕೋರ್ಟ್ ಅಲ್ಲ, ಅಸೆಂಬ್ಲಿ,

ಅಧ್ಯಕ್ಷರು.—ಯಾವ ಸಂದರ್ಭದಲ್ಲಿ ಅವರು ಹೇಳಿದ್ದಾರೆ ಎಂಬುದನ್ನು ತಿಳಿದುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಕೋರ್ಟಿನಲ್ಲಿ ಎರಡೂ ಪಾರ್ಟಿಯವರು ಒಪ್ಪಿಕೊಂಡರೆ ಒಪ್ಪಿಗೆ ಕೊಡುತ್ತಾರೆ. ಅದೇ ತರಹ.....

ಶ್ರೀ ಬಿ. ರಾಚಯ್ಯ.—ಸ್ವಾಮಿ, ಮಾನ್ಯ ಸದಸ್ಯರಿಗೆ ಇದರ ಬಗ್ಗೆ ಟೆಲಿಗ್ರಾಂ ಬಂದಿರಬಹುದು. ನನಗೂ ಮಾಹಿತಿ ಬೇಕಾಗಿದೆ. ಆದ್ದರಿಂದ ಅವರು ಏನು ಹೇಳುತ್ತಾರೋ ಕೇಳಿ.....

ಅಧ್ಯಕ್ಷರು.—ನೀವು ಇವ್ರೂ ಹೆಚ್ಚಿಗೆ ಮಾಹಿತಿ ತರಿಸಿಕೊಳ್ಳಿ. ನಾಳೆನಾಡಿದ್ದು ಇದನ್ನು ಇಡೋಣ.

ಶ್ರೀ ಬಿ. ರಾಚಯ್ಯ.—ಯಾವತ್ತಾದರೂ ಇಟ್ಟುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಅರಾಜಕತೆ ನಿಲ್ಲಬೇಕು. ಇದಕ್ಕೆ ಹಿನ್ನೆಲೆ ಇದೆ. ಪರಿಶಿಷ್ಟ ಜನಾಂಗಕ್ಕೆ ಸೇರಿದವರ ಮೇಲೆ ಅಪಾದನೆ ಹೊರಿಸಿ ಅವರನ್ನು ತೆಗೆಯಬೇಕೆಂದು ಪಿತೂರಿ ನಡೆಯುತ್ತಿದೆ.

(ಗೊಂದಲ)

ಶ್ರೀ ಬಿ. ರಾಚಯ್ಯ.—ಚರ್ಚೆಗೆ ಅವಕಾಶ ಕೊಟ್ಟಾಗ ಅದರ ಬಗ್ಗೆ ಈಗ ಏನೇನೂ ಹೇಳುವುದು ಬೇಡ.

ಅಧ್ಯಕ್ಷರು.—ನಾನು ೫೯ರ ಪ್ರಕಾರ ಅನುಮತಿಯನ್ನು ನಿರಾಕರಿಸಿದ್ದೇನೆ ೬೮ರ ಪ್ರಕಾರ ಚರ್ಚೆಯನ್ನು ಮಧ್ಯಾಹ್ನ ಇಡಬೇಕೋ ನಾಳೆ ಇಡಬೇಕೋ ಎಂಬುದನ್ನು ಹೇಳಿ.

ಶ್ರೀ ಎನ್. ಎಂ. ಅಡ್ಕಂತಾಯ.—ಪರಿಶಿಷ್ಟ ಜನಾಂಗದವರನ್ನು ತೆಗೆಯಬೇಕೆಂದು ಕರ್ನಾಟಕದ ಮಂತ್ರಿಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಕಾಗದ ಬರೆದಿದ್ದಾರೆ.

ಶ್ರೀ ಬಿ. ರಾಚಯ್ಯ.—ನನಗೆ ಪೂರ್ಣ ಮಾಹಿತಿ ಬೇಕು. ಆದ್ದರಿಂದ ನಾಳೆ ಇಟ್ಟುಕೊಳ್ಳಿ.

ಅಧ್ಯಕ್ಷರು.—ಇನ್ನಷ್ಟು ಮಾಹಿತಿ ಇದ್ದರೆ ತರಿಸಿಕೊಳ್ಳಿ. ಅವರೂ ತರಿಸಿಕೊಳ್ಳಲಿ.

ಶ್ರೀ ಎಸ್. ಬಂಗಾರಪ್ಪ.—ಅವರು ಇವೊತ್ತೇ ತಯಾರಾಗಿದ್ದರೆ ನೀವು ಏತಕ್ಕೆ ನಾಳೆ ಎಂದು ಹೇಳಿಕೊಡುತ್ತೀರಿ ? (ಮಾನ್ಯ ರಾಚಯ್ಯನವರ ಪಕ್ಕ ಮಾನ್ಯ ಸಚಿವರಾದ ಜೀವರಾಜ್ ಆಳ್ವ ಅವರು ಕುಳಿತು ಮಾನಾಡಿದ್ದನ್ನು ನೋಡುತ್ತಾ ಹೇಳಿದ ಮಾತು)

ಶ್ರೀ ಎಂ. ರಘುಪತಿ.—ಅವರು ಇವತ್ತೇ ತೆಗೆದುಕೊಳ್ಳಿ ಎಂದು ಒತ್ತಾಯ ಮಾಡುವುದಕ್ಕೆ ಬಂದಿದ್ದರು.

ಶ್ರೀ ಆರ್. ಎನ್. ನಾಯಕ್.—ನಾವು ಹೊಸದಾಗಿ ಕಲಿಯಬೇಕಾಗಿಲ್ಲ. ಅವರೆಲ್ಲಾ ಏತಕ್ಕೆ ತಿರಂಗಾಡುತ್ತಾರೆ ಎಂಬುದು ನಮಗೆ ಗೊತ್ತು. ನಾವೂ ಅವರ ಜೊತೆಯಲ್ಲಿ ಬಂದವರು.

ಶ್ರೀ ಬಿ. ರಾಚಯ್ಯ.—ಅವರ ನಾಯಕರು ಮಾತನಾಡಿದ್ದಾರೆ. ಇನ್ನೊಬ್ಬರು ನಾಯಕರು ಎದ್ದರೆ ಏನು ಮಾಡಲಿ ? ವಿಷಯವನ್ನು ನಾನೇನೂ ಬಚ್ಚಿಡಕಿವುದಕ್ಕೆ ತಯಾರಾಗಿಲ್ಲ. ನಾನೂ ವಿಷಯಗಳನ್ನು ತಿಳಿದುಕೊಳ್ಳಬೇಕಾಗಿದೆ. ಅದಕ್ಕೆ ಅವಕಾಶ ಬೇಕು, ಡಾ॥ ಜೀವರಾಜ ಆಳ್ವ ಅವರು ಹೇಳಿದಹಾಗೆ ಕೇಳ್ತೀನಿ ಎಂದು ಅಲ್ಲ. ಅವರೇನೂ ನನಗೆ ಡಿಕ್ಟೇಟ್ ಮಾಡುವುದಕ್ಕಾಗುವುದಿಲ್ಲ. ಸಲಹೆ ಕೊಡುತ್ತಾರೆ ಅಷ್ಟೆ.

ಅಧ್ಯಕ್ಷರು.—ಅವರೂ ಹೊಸಬರು ಮಾನ್ಯ ಬಸವಣ್ಣಪ್ಪನವರೇ ತಮ್ಮ ಬೇಡಿಕೆ ಮಂಡಿಸಿ.

ವಿತ್ತೀಯ ಕಾರ್ಯಕಲಾಪಗಳು.

೧೯೮೫-೮೬ನೇ ಸಾಲಿನ ಆಹಾರ ಇಲಾಖಾ ಬೇಡಿಕೆ ಕ್ರ. ಸ. ೨೧ರ ಮೇಲಿನ ಚರ್ಚೆ.

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು):—ಮಾನ್ಯ ಅಧ್ಯಕ್ಷರೆ, ರಾಜಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ ೩೧-೩-೧೯೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜುಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪೂಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೮,೭೯,೧೯,೦೦೦